

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 207 | Friday 25-04-2025 | E-mail : maruti.b.hosamani76@gmail.com | Page: 4 | Price : Rs. 1/-


## ಗಿಡಗಳಿಗೆ ತಂತಿ ಕಟ್ಟುವುದರ ವಿರುದ್ಧ ಕ್ರಮಕ್ಕೆ ಅಮರೇಗೌಡ ಮಲ್ಲಾಪುರ ಒತ್ತಾಯ



**ಸಿಹಿ ಕಹಿ ಸುದ್ದಿ,**
**ಸಿಂಧನೂರು** : ನಗರದಾದ್ಯಂತ ರಸ್ತೆ ಬದಿಯಲ್ಲಿರುವ ಗಿಡ ಮರಗಳಿಗೆ ತಂತಿ ಕಟ್ಟಿ ಗಿಡಗಳಿಗೆ ಹಾನಿ ಮಾಡುವವರ ವಿರುದ್ಧ ಅರಣ್ಯ ಅಧಿಕಾರಿಗಳು ನಗರ ಸಭೆ ಅಧಿಕಾರಿಗಳು ಕಾನೂನು ಕ್ರಮ ಜರುಗಿಸ ಬೇಕು ಎಂದು ವನಸಿರಿ ಫೌಂಡೇಷನ್ ರಾಜ್ಯಾಧ್ಯಕ್ಷ ಅಮರೇಗೌಡ ಮಲ್ಲಾಪುರ ಒತ್ತಾಯಿಸಿದರು.

ಸಿಂಧನೂರು ನಗರದಾದ್ಯಂತ ಬ್ಯಾನರ್ ಗಳನ್ನು,ಲೈಟಿಂಗ್ ಗಳು, ಹಾಗೂ ತಮ್ಮ ಅಂಗಡಿ ಬೋರ್ಡಗಳನ್ನು ಕಟ್ಟುವ ಮೂಲಕ ಗಿಡ ಮರಗಳಿಗೆ ತಂತಿ ಬಿಗಿದು ಗಿಡಗಳಿಗೆ ತೊಂದರೆ ಉಂಟು ಮಾಡುತ್ತಿದ್ದಾರೆ. ಇದ-ರಿಂದ ಗಿಡ ಮರಗಳ ಬೆಳವಣಿಗೆ ಕುಂಠಿತ ಗೊಳ್ಳುತ್ತಿವೆ. ಅರಣ್ಯ ಅಧಿಕಾರಿಗಳು ಇದರ ವಿರುದ್ಧ ಕೂಡಲೇ ಕ್ರಮ ಜರುಗಿಸ ಬೇಕು ಮತ್ತು ಕೇಸ್ ದಾಖಲಿಸಬೇಕು.

ಇಲ್ಲದಿದ್ದರೆ ಸಿಂಧನೂರು ನಗರದಾದ್ಯಂತ ಬಿಸಿಲಿನ ತಾಪಮಾನ ಹೆಚ್ಚಾಗಲಿದೆ. ಸಾರ್ವಜನಿಕರು ನೆರಳನ್ನು ಹುಡುಕಿ ಕೊಂಡು ಹೋಗಿ ಕುಳಿತು ಕೊಳ್ಳುವ ಪರಿಸ್ಥಿತಿ ನಿರ್ಮಾಣ ವಾಗಲಿದೆ.

ನೀರಿಗೆ ಅಹಾಕಾರ ಪಡುವ ಪರಿಸ್ಥಿತಿ ಉಲ್ಬಣ ಗೊಲ್ಲಬಹುದು.

ದಯವಿಟ್ಟು ಅರಣ್ಯ ಅಧಿಕಾರಿಗಳು ಹಾಗೂ ನಗರ ಸಭೆ ಅಧಿಕಾರಿಗಳು ಇತ್ತ ಕಡೆ ಗಮನ ಹರಿಸಿ ಈತರ ಗಿಡಗಳಿಗೆ ತಂತಿ ಕಟ್ಟುವುದನ್ನು ನಿಲ್ಲಿಸ ಬೇಕು ಮತ್ತು ತಂತಿ ಕಟ್ಟುವವರಿಗೆ ಎಚ್ಚರಿಕೆ ನೀಡಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ವನಸಿರಿ ಪೌಂಡೇಷನ್ ರಾಜ್ಯಾಧ್ಯಕ್ಷ ಅಮರೇಗೌಡ ಮಲ್ಲಾಪುರ ಅಗ್ರಹಿಸಿದರು ಎಂದು ವರದಿಯಾಗಿದೆ.

## ಮಲೇರಿಯಾ ರೋಗ ತಡೆಗೆ ಸ್ವಯಂ ರಕ್ಷಣಾ ಕ್ರಮಗಳನ್ನು ಪಾಲಿಸಿರಿ: ಎಸ್.ಎಸ್ ಅಂಗಡಿ



**ಸಿಹಿ ಕಹಿ ಸುದ್ದಿ,**
**ಬಾಗಲಕೋಟೆ** : ಜಿಲ್ಲಾ ಆರೋಗ್ಯ ಇಲಾಖೆಯಿಂದ. ತಾಲೂಕಿನ ಬೆನಕಟ್ಟಿಯ ವ್ಯಾಪ್ತಿಯ ಬೆನಕಟ್ಟಿ, ಗುಂಡನಪಲ್ಲೆ ಗ್ರಾಮದಲ್ಲಿ "ವಿಶ್ವ ಮಲೇರಿಯಾ ದಿನ ಜನ ಜಾಗೃತಿ" ಆಯೋಜಿಸಲಾಗಿತ್ತು. ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್.ಎಸ್ ಅಂಗಡಿಯವರು ನಿಮ್ಮ ಆರೋಗ್ಯ ನಮ್ಮ ಬದ್ಧತೆ, ಸ್ವಯಂ ರಕ್ಷಣಾ ಕ್ರಮಗಳನ್ನು ಪಾಲಿಸುವುದರಿಂದ ಸಾಂಕ್ರಾಮಿಕ ರೋಗಗಳನ್ನು ತಡೆಯಬಹುದು ಮಲೇರಿಯಾ ರೋಗವು ಅನಾಫಿಲಿಸ್ ಸೊಳ್ಳೆ ಕಚ್ಚುವುದರಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಚಳಿ ಜ್ವರ ನಡುಕ, ತಲೆನೋವು ವಾಂತಿ ಮಲೇರಿಯಾ ಲಕ್ಷಣವಾಗಿದೆ. ನಿಂತ ನೀರಿನಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. ನೀರಿನ ಸಂಗ್ರಹಗಳ ಪರಿಕರಗಳ ಮೇಲೆ ಮುಚ್ಚಳಿಕೆ ಹಾಕಬೇಕು ಸುತ್ತಮುತ್ತ ಪರಿಸರ ಸ್ವಚ್ಛತೆಯಿಂದ ರೋಗಗಳ ತಡೆಯಬಹುದು.

ಘನತಾಜ್ಯ ಕಸ ವಿಲೇವಾರಿ ಮಾಡಬೇಕು ಸ್ವಯಂ ರಕ್ಷಣಾ ಕ್ರಮಗಳನ್ನು ಪಾಲಿಸಬೇಕು ಸೊಳ್ಳೆ ನಿರೋಧಕ ಸೊಳ್ಳೆ ಪರದೆ ಉಪಯೋಗಿಸ ಬೇಕು ಆರೋಗ್ಯ ಇಲಾಖೆಯ ಆರೋಗ್ಯ ನಿರೀಕ್ಷಣಾಧಿಕಾರಿಗಳು ತಮ್ಮ ಮನೆಗೆ ಬಂದಾಗ ನಿಖರ ಮಾಹಿತಿ ನೀಡಿ ಸಹಕರಿಸ ಬೇಕು ಯಾವುದೇ ತರಹದ ಜ್ವರ ಕಾಣಿಸಿದರೆ ರಕ್ತ ಲೇಪನ ಪರೀಕ್ಷೆ ಮಾಡಿಸಬೇಕು ಭಯ ಬೇಡ ಮಲೇರಿಯಾ ಪರೀಕ್ಷೆ ಚಿಕಿತ್ಸೆ ಎಲ್ಲಾ ಸರಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿರುತ್ತದೆ ಮಲೇರಿಯಾ ನಿಯಂತ್ರಣ ನಮ್ಮ ಕೈಯಲ್ಲಿದೆ ಹೆಚ್ಚಿನ ಆರೋಗ್ಯ ಸಮಸ್ಯೆಗಳಿಗೆ 104 ಉಚಿತ ಕರೆ ಮೂಲಕ ಆರೋಗ್ಯ ಸಲಹೆ ಪಡೆದು ಕೊಳ್ಳಬಹುದು ಎಂದರು.

ಗ್ರಾಮದಲ್ಲಿ ಜ್ವರ ಪ್ರಕರಣಗಳು ಸಮೀಕ್ಷೆ ಮಾಡಿ ಸಂಶಯು ಮಲೇರಿಯಾ ರಕ್ತ ಲೇಪನ ಸಂಗ್ರಹಿಸಿ ಪ್ರಯೋಗಾಲಕ್ಕೆ ಕಳಿಸಲಾಯಿತು. "ವಿಶ್ವ ಮಲೇರಿಯಾ ದಿನ" ಜನ ಜಾಗೃತಿ ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ವಿವಿಧ ಹಂತದ ಆರೋಗ್ಯ ಅಧಿಕಾರಿಗಳು, ಆಶಾ ಕಾರ್ಯಕರ್ತರು ಗ್ರಾಮದ ಮುಖಂಡರು ಯುವಕರು ಸ್ತ್ರೀಶಕ್ತಿ ಸಂಘದ ಸದಸ್ಯರು ಭಾಗವಹಿಸಿದ್ಧರು.

## ಯುವ ಶಕ್ತಿಯ ರಹಸ್ಯ ಬ್ರಹ್ಮಚರ್ಯ ಜೀವನ – ಯತೀಶ್.ಎಂ ಸಿದ್ದಾಪುರ



**ಚಳ್ಳಕೆರೆ** : ಯುವ ಶಕ್ತಿಯ ರಹಸ್ಯ ಬ್ರಹ್ಮಚರ್ಯ ಜೀವನವಾಗಿರುತ್ತದೆ ಎಂದು ಚಳ್ಳಕೆರೆಯ ಶ್ರೀಶಾರದಾಶ್ರಮದ ಸ್ವ-ಯಂ ಸೇವಕ ಯತೀಶ್.ಎಂ ಸಿದ್ದಾಪುರ ತಿಳಿಸಿದರು. ನಗರದ ವಾಸವಿ ಕಾಲೋನಿಯ ಶ್ರೀಶಾರದಾಶ್ರಮದ ದೇವಸ್ಥಾನದಲ್ಲಿ ಬಾಪೂಜಿ ಆಯುರ್ವೇದ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ವ್ಯಕ್ತಿತ್ವ ನಿರ್ಮಾಣಕಾರಿ ತರಗತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು"ಪ್ರಾತಃಸ್ಮರಣೀಯಬ್ರಹ್ಮರತ್ನಮಾಲಾ ಸ್ತೋತ್ರ" ದ ಅರ್ಥ ವಿವರಣೆಯನ್ನು ನೀಡಿ-ದರು. ಸುಭದ್ರ ವ್ಯಕ್ತಿತ್ವದ ನಿರ್ಮಾಣಕ್ಕೆ ಬ್ರಹ್ಮಚರ್ಯವೇ ಆಧಾರ ಸ್ತಂಭವಾಗಿದ್ದು ಇದರ ನಿತ್ಯಾನುಷ್ಠಾನದಿಂದ ಅನೇಕ ಪ್ರಯೋಜನಗಳಿದ್ದುಇದರಅನುಸರಣೆಅಗತ್ಯ ಎಂದರು. ಈ ಉಪನ್ಯಾಸದ ಆರಂಭದಲ್ಲಿ ಭಜನೆಯನ್ನು ಯತೀಶ್.ಎಂ ಸಿದ್ದಾಪುರ ನಡೆಸಿ ಕೊಟ್ಟರೆ, ಮಾತಾಜೀ ತ್ಯಾಗಮಯೀ ಅವರು ವಿದ್ಯಾರ್ಥಿಗಳಿಗೆ ಧ್ಯಾನಾಭ್ಯಾಸ ಮಾಡಿಸಿದರು. ಈ ಕಾರ್ಯಕ್ರಮದಲ್ಲಿ ಡಾ, ಭೂಮಿಕ, ಸಂತೋಷ್, ಅಂಬಣ್ಣ ಸೇರಿದಂತೆ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

**ವರದಿ:ಯತೀಶ್.ಎಂ ಸಿದ್ದಾಪುರ, ಚಳ್ಳಕೆರೆ**

## ರಾಜ್ಯಮಟ್ಟದ ಅತ್ಯುತ್ತಮ ಉಪನ್ಯಾಸಕ ಪ್ರಶಸ್ತಿಗೆಬಸವರಾಜ ಜಾಲವಾದಿ ಆಯ್ಕೆ



**ಕೊಲ್ಹಾರ** : ರಾಜ್ಯದಾದ್ಯಂತ ಹತ್ತು ಹಲವಾರು ವಿಷಯಗಳಲ್ಲಿ ಸರಿಸುಮಾರು 650ಕ್ಕೂ ಹೆಚ್ಚು ಉಪನ್ಯಾಸಗಳನ್ನು ನೀಡಿ ಸಮಾಜವನ್ನು ತಿದ್ದುವ,ತೀಡುವ ಹಾಗೂ ತಮ್ಮ ಪ್ರೇರಣಾತ್ಮಕ ಮಾತುಗಳಿಂದ ಯುವಕರನ್ನು ಹುರಿದುಂಬಿಸುವ, ವಿದ್ಯಾರ್ಥಿಗಳ ಮೆಚ್ಚಿನ ಉಪನ್ಯಾಸಕರಾಗಿ ಹೊರಹೊಮ್ಮಿರುವ ಕೊಲ್ಹಾರ ತಾಲೂಕಿನ ಸರಕಾರಿ ಪದವಿ ಪೂರ್ವ ಕಾಲೇಜು ಕೂಡಗಿ ಇಲ್ಲಿ ಸೇವೆ ಸಲ್ಲಿಸುತ್ತಿರುವ ಸಮಾಜಶಾಸ್ತ್ರದ ಹಿರಿಯ ಉಪನ್ಯಾಸಕ ಬಸವರಾಜ ಎಸ್ ಜಾಲವಾದಿಯವರು ರಾಜ್ಯಮಟ್ಟದ ಅತ್ಯುತ್ತಮ ಉಪನ್ಯಾಸಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆಂದು ಪ್ರಶಸ್ತಿ ಪ್ರಧಾನ ಸಮಿತಿ ಅಧ್ಯಕ್ಷ ಅರುಣ ಕೋರವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ಸಮಾಜಶಾಸ್ತ್ರ ವಿಷಯದಲ್ಲಿ ರಾಜ್ಯಮಟ್ಟದ ಸಂಪನ್ಮೂಲ ವ್ಯಕ್ತಿಯಾಗಿರುವ ಇವರು ಬೆಳಗಾವಿ, ಚಿಕ್ಕೋಡಿ, ಧಾರವಾಡ, ಗದಗ,ಹಾವೇರಿ,ಮತ್ತು ವಿಜಯಪುರ, ಬಾಗಲಕೋಟೆ ಸಮಾಜಶಾಸ್ತ್ರ ಉಪನ್ಯಾಸಕರಿಗೆ ತರಬೇತಿ ನೀಡಿ ಸಮಾಜಶಾಸ್ತ್ರ ವಿಷಯದಲ್ಲಿ ವಿದ್ಯಾರ್ಥಿಗಳು ಅತಿ ಹೆಚ್ಚು ಅಂಕಗಳನ್ನು ಪಡೆಯುವಲ್ಲಿ ಪಾತ್ರರಾಗಿದ್ದಾರೆ ಹವ್ಯಾಸಿ ಓದುಗರಾಗಿರುವ ಇವರು ಕವಿ, ಲೇಖಕ, ಸಾಹಿತಿಗಳು ಇವರು ನೂರಕ್ಕೂ ಹೆಚ್ಚು ಲೇಖನಗಳನ್ನು ನಾಡಿನ ವಿವಿಧ ಪತ್ರಿಕೆಗಳಲ್ಲಿ ಹಾಗೂ ಧಾರವಾಡ ವಿಜಯಪುರ ಬಾನುಲಿ ಕೇಂದ್ರದಿಂದರೇಡಿಯೋಭಾಷಣಗಳ ಮೂಲಕ ಗಮನ ಸೆಳೆದಿದ್ದಾರೆ. ಕನ್ನಡ ಸಾರಸ್ವತ ಲೋಕಕ್ಕೆ ನಾಲ್ಕಾರ ಕೃತಿಗಳನ್ನೂ ಕೂಡಾ ಕೊಡುಗೆಯಾಗಿ ನೀಡಿದ್ದಾರೆ ಇವರಿಗೆ ಏಪ್ರಿಲ್ 26 ರಂದು ಕೋರವಾರ ದಲ್ಲಿ ಆಯೋಜಿಸಿರುವ ಬಾಬಾಸಾಹೇಬ್ ಡಾ. ಬಿ.ಆರ್ ಅಂಬೇಡ್ಕರ್ ಅವರ 134 ನೇ ಜಯಂತೋತ್ಸವದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಗುವುದೆಂದು ಪ್ರಶಸ್ತಿ ಪ್ರಧಾನ ಸಮಿತಿ ಅಧ್ಯಕ್ಷ ಅರುಣ ಕೋರವಾರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಮೆಜಾನ್ ಫ್ರೆಶ್ 170 ಕ್ಕೂ ಹೆಚ್ಚು ನಗರಗಳಿಗೆ ವಿಸ್ತರಣೆ


**ಬಾಗಲಕೋಟೆ** : ಅಮೆಜಾನ್ ಇಂಡಿಯಾ ತನ್ನ ದಿನಸಿ ಸೇವೆಯಾದ ಅಮೆಜಾನ್ ಫ್ರೆಶ್‌ಗೆ ಗಮನಾರ್ಹ ವಿಸ್ತರಣೆ ಮಾಡಿರುವುದಾಗಿ ಘೋಷಿಸಿದ್ದು, ದೇಶದ 170 ನಗರ/ಪಟ್ಟಣಗಳಿಗೆ ವಿಸ್ತರಿಸಿದೆ. 2023 ರ ಅರ್ಧ ವರ್ಷಕ್ಕೆ ಹೋಲಿಸಿದರೆ 2024 ರ ಅರ್ಧವರ್ಷದಲ್ಲಿ ಅಮೆಜಾನ್ ಫ್ರೆಶ್ 50% ಬೆಳವಣಿಗೆ ಕಂಡಿರುವುದಕ್ಕೆ ಪೂರಕವಾಗಿ ಈ ವಿಸ್ತರಣೆ ಮಾಡಲಾಗುತ್ತಿದೆ. ಅಮೆಜಾನ್.ಇಟಿ ನಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ವಿಭಾಗವಾಗಿ ತನ್ನ ಸ್ಥಾನ ಭದ್ರಪಡಿಸಿಕೊಂಡಿದೆ.ಅಮೆಜಾನ್ ಫ್ರೆಶ್‌ನಲ್ಲಿ ವೆಟ್ ಮತ್ತು ಡ್ರೈ ದಿನಸಿಗಳ ಸಮಗ್ರ ಶ್ರೇಣಿಯನ್ನು ಅಮೆಜಾನ್ ಫ್ರೆಶ್ ಒದಗಿಸುತ್ತದೆ. ಇದರಲ್ಲಿ ಹಣ್ಣು, ತರಕಾರಿಗಳು, ಡೈರಿ ಉತ್ಪನ್ನಗಳಾದ ಹಾಲು, ಬ್ರೆಡ್, ಫ್ರೋಜನ್ ಉತ್ಪನ್ನಗಳು, ಬ್ಯೂಟಿ ಐಟಮ್‌ಗಳು, ಬೇಬಿ ಕೇರ್ ಉತ್ಪನ್ನಗಳು, ವೈಯಕ್ತಿಕ ಆರೈಕೆ ಉತ್ಪನ್ನಗಳು ಮತ್ತು ಸಾಕುಪ್ರಾಣಿ ಸಾಮಗ್ರಿಗಳು ಇವೆ. ಅಪಾರ ಉಳಿತಾಯ, ವ್ಯಾಪಕ ಆಯ್ಕೆ ಮತ್ತು ಮನೆಬಾಗಿಲಿಗೆ ಡೆಲಿವರಿ ನೀಡುವ ಅನುಕೂಲದ ಜೊತೆಗೆ ಸರಾಗ ಶಾಪಿಂಗ್ ಅನುಭವ ಒದಗಿಸುವ ಗುರಿ ಹೊಂದಿದೆ.

ತಾಜಾತನ ಮತ್ತು ಗುಣಮಟ್ಟವ ಖಾತರಿಪಡಿಸಿಕೊಳ್ಳಲು, 11,000 ಕ್ಕೂ ಹೆಚ್ಚು ರೈತರಿಂದ ಹಣ್ಣು ಮತ್ತು ತರಕಾರಿಗಳನ್ನು ಅಮೆಜಾನ್ ಫ್ರೆಶ್ ಮಾರಾಟ ಮಾಡುತ್ತದೆ. ಎಲ್ಲ ಉತ್ಪನ್ನಗಳೂ ಕಟ್ಟುನಿಟ್ಟಾದ 4 ಹಂತದ ಗುಣಮಟ್ಟದ ತಪಾಸಣೆ ಪ್ರಕ್ರಿಯೆಯನ್ನು ನಡೆಸುತ್ತವೆ. ನಂತರವೇ, ಅವು ಗ್ರಾಹಕರ ಮನೆಬಾಗಿಲಿಗೆ ತಲುಪುತ್ತವೆ. ಗುಣಮಟ್ಟಕ್ಕೆ ಈ ಬದ್ಧತೆಯು ಅಮೆಜಾನ್ ಫ್ರೆಶ್‌ಗೆ ಗ್ರಾಹಕರ ಆದ್ಯತೆಯನ್ನು ಹೆಚ್ಚಿಸಿದೆ. ಅಲ್ಲದೆ ಇದಕ್ಕೆ ಉಳಿತಾಯ, ಅಪಾರ ಆಯ್ಕೆ ಮತ್ತು ವಿಶ್ವಾಸಾರ್ಹ ಡೆಲಿವರಿಗಳು ಸೇರಿವೆ.

ಅಮೆಜಾನ್ ಫ್ರೆಶ್ ಇಂಡಿಯಾದ ನಿರ್ದೇಶಕ ಶ್ರೀಕಾಂತ್ ಶ್ರೀ ಮಾತನಾಡಿ "170 ಕ್ಕೂ ಹೆಚ್ಚು ನಗರ/ಪಟ್ಟಣಗಳಿಗೆ ನಾವು ವಿಸ್ತರಣೆ ಮಾಡಿದ್ದು, ಭಾರತ ಟಯರ್ 2 ಮತ್ತು ಟಯರ್ 3 ನಗರ/ಪಟ್ಟಣಗಳಿಗೆ ಸೇವೆ ಒದಗಿಸುತ್ತಿದ್ದೇವೆ. ಇದರಿಂದಾಗಿ ಸ್ಪರ್ಧಾತ್ಮಕ ದರದಲ್ಲಿ ಉನ್ನತ ಗುಣಮಟ್ಟದ ದಿನಸಿಗಳನ್ನು ಪಡೆಯಲು ಮತ್ತು ಮನೆಯಲ್ಲೇ ಅನುಕೂಲಕರವಾಗಿ ಡೆಲಿವರಿ ಪಡೆಯಲು ಸಹಾಯ ಮಾಡುತ್ತದೆ. 2023 ರ ಅರ್ಧ ವರ್ಷಕ್ಕೆ ಹೋಲಿಸಿದರೆ 2024 ರ ಅರ್ಧ ವರ್ಷದಲ್ಲಿ 50%ಬೆಳವಣಿಗೆ ಕಂಡಿದ್ದು, ಅಮೆಜಾನ್ ಫ್ರೆಶ್‌ನಲ್ಲಿ ಲಭ್ಯ ಉಳಿತಾಯ, ಅಪಾರ ಆಯ್ಕೆ ಮತ್ತು ವಿಶ್ವಾಸಾರ್ಹ ಡೆಲಿವರಿ ಸಮಯದ ಬಗ್ಗೆ ಗ್ರಾಹಕರು ವಿಶ್ವಾಸ ವ್ಯಕ್ತಪಡಿಸಿದ್ದನ್ನು ನಾವು ಗಮನಿಸಿದ್ದೇವೆ. ಭಾರತದಲ್ಲಿ ಆನ್‌ಲೈನ್ ದಿನಸಿ ಶಾಪಿಂಗ್‌ನಲ್ಲಿ ಕ್ರಾಂತಿ ಮೂಡಿಸುವ ಮತ್ತು ಖರೀದಿಯನ್ನು ಸರಾಗವಾಗಿಸುವುದು ಮತ್ತು ನಮ್ಮ ಗ್ರಾಹಕರಿಗೆ ರಿವಾರ್ಡಿಂಗ್ ಅನುಭವ ಉಂಟುಮಾಡುವ ಗುರಿ ಹೊಂದಿದ್ದೇವೆ."

ಅಮೆಜಾನ್ ಫ್ರೆಶ್‌ನ ವಿಸ್ತರಣೆಯು ಗೋರಖ್‌ಪುರ, ಚಿತ್ತೂರ್, ಅಂಬಾಲಾ, ವಿಜಯವಾಡ ಮತ್ತು ಇತರ ಪ್ರದೇಶಗಳಿಗೆ ಸಾಗಿದ್ದು, ಗ್ರಾಹಕರು ಇನ್ನಷ್ಟು ಹೆಚ್ಚು ಉಳಿತಾಯವನ್ನು ಪಡೆಯಬಹುದು ಮತ್ತು ಅಮೆಜಾನ್‌ಫ್ರೆಶ್‌ನಸೆಲ್ಲರ್‌ಗಳಿಂದ ಆಕರ್ಷಕ ಡೀಲ್‌ಗಳನ್ನು ಪಡೆಯಬಹುದಾಗಿದೆ. ಅಲ್ಲದೆ, ಬ್ಯಾಂಕ್ ಪಾಲುದಾರರಿಂದಲೂ ಈ ಅನುಕೂಲಗಳನ್ನು ಗ್ರಾಹಕರು ಪಡೆಯಬಹುದಾಗಿದೆ. ಈ ವಿಸ್ತರಣೆಯು ಆನ್‌ಲೈನ್ ದಿನಸಿ ಶಾಪಿಂಗ್ ಅನುಭವವನ್ನು ಇನ್ನಷ್ಟು ಅದ್ಭುತವಾಗಿಸಲಿದೆ.

## ಒಬ್ಬ ಸಾಧಕ ಇನ್ನೊಬ್ಬ ಸಾಧಕನನ್ನು ಗುರುತಿಸಿ ಗೌರವಿಸುವಂಥಾಗಬೇಕು ಹಣಮಂತ ಹಾವಣ್ಣವರ



**ಹಳ್ಳೂರ** : ಸಮಾಜದಲ್ಲಿ ಒಬ್ಬ ಸಾಧಕ ಸಾಧನೆ ಮಾಡುತ್ತಿರುವ ಇನ್ನೊಬ್ಬ ಸಾಧಕನನ್ನು ಗುರುತಿಸಿ ಗೌರವಿಸಿದರೆ ಸ್ಫೂರ್ತಿ ನೀಡಿದಂತಾಗುತ್ತದೆ ಸಮಾಜದಲ್ಲಿ ಒಳ್ಳೆ ಕೆಲಸ ಕಾರ್ಯ, ಸಾಧನೆ ಮಾಡುವುವರಿಗೆ ಅಡ್ಡ ಗಾಲು ಹಾಕಿ ಅವಮಾಣಿಸದೆ ಸಹಾಯ ಸಹಕಾರ ನೀಡಬೇಕೆಂದು ಗುಲಗಂಜಿ ಕೊಪ್ಪದ ಗ್ರಾಮ ಪಂಚಾಯತ್ ಸದಸ್ಯ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತ ಹನಮಂತ ಹಾವನ್ನವರ ಹೇಳಿದರು. ಅವರು ಹಳ್ಳೂರ ಗ್ರಾಮದ ಸಮಾಜ ಸೇವಕ ಪ್ರಶಸ್ತಿಗಳ ಸರದಾರ ಕಾಯಕಯೋಗಿ ಮುರಿಗೆಪ್ಪ ಮಾಲಗಾರ ಅವರ ಮನೆಗೆ ಬೆಟ್ಟಿನೀಡಿ ಅವರಿಗೆ ಇತ್ತೀಚಿಗೆ ಬೆಂಗಳೂರಿನಲ್ಲಿ ಸುವರ್ಣ ಕರ್ನಾಟಕ ಸಾಧಕ ರಾಷ್ಟ್ರ ಮಟ್ಟದ ಮಾಧ್ಯಮ ರತ್ನ ಪ್ರಶಸ್ತಿ ಸ್ವೀಕರಿಸಿದ್ದಕ್ಕಾಗಿ ಸನ್ಮಾನಿಸಿ ಗೌರವಿಸಿ ಅಯೋಧ್ಯೆಯ ಪುರುಷೋತ್ತಮ ಶ್ರೀ ರಾಮನ ಪ್ರಸಾದ ನೀಡಿ ಶುಭ ಹಾರೈಸಿ ಮಾತನಾಡಿ ಸಮಾಜದ ಬಡ ಜನರ ಹಿತಾಸಕ್ತಿ ಕಾಪಾಡಿ ನಿರಂತರ ಸಮಾಜ ಸೇವೆ ಜೊತೆಗೆ ಪತ್ರಕರ್ತ, ಹಾಗೂ ಸಮೀರವಾಡಿ ಸಕ್ಕರೆ ಕಾರ್ಖಾನೆಯಲ್ಲಿ ನೌಕರಿ ಮಾಡುತ್ತಾ ಚಿಕ್ಕ ವಯಸಿನಲ್ಲಿಯೇ ರಾಜ್ಯ ಮಟ್ಟದಲ್ಲಿ ಅನೇಕ ಪ್ರಶಸ್ತಿ ಪಡೆದುಕೊಂಡು ಹೆಸರು ವಾಸಿಯಾಗಿದ್ದಾರೆ ಬಸವಣ್ಣವರ ತತ್ವ ಜೀವನದಲ್ಲಿ ಅಳವಡಿಸಿಕೊಂಡು ಹಗಲಿರುಳು ಕಾಯಕದಲ್ಲಿ ತೊಡಗಿ ಯಾವುದೇ ದುಶ್ಚಟಕ್ಕೆಬಲಿಯಾಗದೆ ಕೆಟ್ಟವರ ಸಹವಾಸ ಮಾಡದೇ ನೇರ ನುಡಿಯುಳ್ಳ ಸಮಾಜಕ್ಕೆ ಸಹಾಯ ಮಾಡಬೇಕೆನ್ನುವ ಸಹೃದಯದಿಂದ ಸಮಾಜ ಸೇವೆ ರೂಪದಲ್ಲಿ ಕೊಡುಗೆ ನೀಡುತ್ತಿರುವ ಮುರಿಗೆಪ್ಪ ಮಾಲಗಾರ ಅವರ ಮನೆಯಲ್ಲಿ ಸನ್ಮಾನ ಸವಿ ನೆನಪಿನ ಕಾಣಿಕೆ ನೋಡಿ ಹರ್ಷ ವ್ಯಕ್ತ ಪಡಿಸಿ ಸಮಾಜದಲ್ಲಿನ ಈಗಿನ ಯುವ ಜನಾಂಗದವರಿಗೆ ಮಾದರಿಯಾಗಿದ್ದಾರೆ.ನಿಜಕ್ಕೂ ಇವರು ಮಾಡುವ ಕಾರ್ಯ ಶ್ಲಾಘನೀಯವಾದದ್ದು ಎಂದು ಹೇಳಿದರು.

### ನವನಗರ ಸ.ಪ್ರ.ದ ಕಾಲೇಜಿನಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕದಿಂದ ಮೂರು ದಿನದ ಬೇಸಿಗೆ ಶಿಬಿರ ಉದ್ಘಾಟನೆ

## ಬೇಸಿಗೆ ಶಿಬಿರವು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಬುನಾದಿ: ಎಸ್.ಎಸ್.ದಳವಾಯಿ




**ಬಾಗಲಕೋಟೆ** : ನಮ್ಮ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ನಡೆಸುವ ಬೇಸಿಗೆ ಶಿಬಿರದಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳುವದರಿಂದ ಸಮಾಜದಲ್ಲಿ ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಸಹಾಯಕವಾಗುತ್ತದೆ. ಬೇಸಿಗೆ ಶಿಬಿರವು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಬುನಾದಿ ಎಂದು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಕಾರ್ಯದರ್ಶಿ ಎಸ್.ಎಸ್. ದಳವಾಯಿ ಅವರು ಹೇಳಿದರು

ಅವರು ಶುಕ್ರವಾರ ಬಾಗಲಕೋಟೆ ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳ ಆಶ್ರಯದಲ್ಲಿ ಮೂರು ದಿನಗಳ ಕಾಲ ನಡೆಯುವ ಬೇಸಿಗೆ ಶಿಬಿರಕ್ಕೆ ಸಸಿಗೆ ನೀರುಣಿಸಿ, ಉದ್ಘಾಟನೆ ಮಾಡಿ ಮಾತನಾಡಿದರು. ಮುಂದುವರಿದು ಮಾತನಾಡಿ ರೋವರ್ಸ್ ಮತ್ತು ರೇಂಜರ್ಸ್‌ಗಳು ಪರಿಸರ ಸಂರಕ್ಷಣೆ ಮಾಡುವ ಸಂಕಲ್ಪ ಮಾಡಿ, ನಮ್ಮ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ನಿಯಮಗಳು ತಪ್ಪದೇ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದರು

ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಡಾ.ಅರುಣಕುಮಾರ ಗಾಳಿ ಅವರು ಮಾತನಾಡಿ, ನಮ್ಮ ಪದವಿ ವಿದ್ಯಾರ್ಥಿಗಳಿಗೆ ಶಿಬಿರಗಳು ಉತ್ತಮ ನಡುವಳಿಕೆ ಕಲಿಸುತ್ತೇವೆ. ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರತಿಜ್ಞಾ ವಿಧಿಯಂತೆ ವಿದ್ಯಾರ್ಥಿಗಳು ದೇವರು ಮತ್ತು ದೇಶ ಸೇವೆ ಮಾಡುವ ಮನೋಭಾವ ಬೆಳೆಸಿಕೊಂಡು, ಸಮಾಜ ಸೇವೆಯ ಮೂಲಕ ತಮ್ಮಲ್ಲಿ ನಂಬಿಕೆ ಮತ್ತು ವಿಶ್ವಾಸ ಗಳಿಸಲು ಸಾಧ್ಯವಿದೆ ಎಂದು ಹೇಳಿದರು

ಮುಖ್ಯ ಅತಿಥಿಗಳಾಗಿ ಜಿಲ್ಲಾ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಚಾಲಕ ಪ್ರಮೋದ ಚೌಗಲೆ ಅವರು ಪಾಲ್ಗೊಂಡು ಮಾತನಾಡಿ, ಪ್ರತಿ ವರ್ಷ ನಡೆಸುವ ಬೇಸಿಗೆ ಶಿಬಿರಗಳಿಂದ ವಿದ್ಯಾರ್ಥಿಗಳುಹೊಸಹೊಸವಿಚಾರಗಳನ್ನು ತಿಳಿದುಕೊಳ್ಳಲು ಪೂರಕವಾಗಿದ್ದು. ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗದಲ್ಲಿ ಪ್ರತಿಶತ 5 ರಷ್ಟು ಮೀಸಲಾತಿಯನ್ನು ನೀಡಲಾಗುತ್ತಿದೆ. ರೇಂಜರ್ಸ್, ರೋವರ್ಸ್ ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು. ತಮ್ಮ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ಸರಿಯಾಗಿ ಅರಿತುಕೊಂಡರೆ ಸುಂದರ ಬದುಕು ಕಟ್ಟಿಕೊಳ್ಳಲು ಸಾಧ್ಯವಿದೆ ಎಂದರು. ಸಂಪನ್ಮೂಲ ವ್ಯಕ್ತಿಗಳಾಗಿ ರೋವರ್ಸ್ ಸ್ಕೌಟ್ಸ್ ಲೀಡರ್ ರವಿ ಗಡದನ್ನವರ ಅವರು ಅಳತೆ ಮತ್ತು ಅಂದಾಜು ಮಹತ್ವ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿರೋವರ್ಸ್‌ಲೀಡರ್ ಪ್ರೊ.ಪರಸಪ್ಪ ತಳವಾರ ಪ್ರಾಸ್ತಾವಿಕ ನುಡಿ ಹೇಳಿದರು. ರೇಂಜರ್ಸ್ ಲೀಡರ್ ಡಾ.ಸುಮಂಗಲಾ ಮೇಟಿ, ರೋವರ್ಸ್ ಲೀಡರ್ ಡಾ.ಚಂದ್ರಶೇಖರ ಕಾಳನ್ನವರ, ರೇಂಜರ್ಸ್ ಲೀಡರ್ ಪ್ರೊ.ಸವಿತಾ ಬದಾಮಿ, ಸುಮಿತ್ರಾ ಕಾಂಬೋಜಿ ಅವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಶಿಬಿರದಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳ ಅರವತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಮಕ್ಕಳ ಪಾಲನಾ ಸಂಸ್ಥೆಗಳ ಕಟ್ಟಡ ನಿರ್ಮಾಣ ಸ್ಥಳಕ್ಕೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ರಾಮತ್ನಾಳ ಭೇಟಿ: ಪರಿಶೀಲನೆ

**ಕೊಪ್ಪಳ :** ಕೊಪ್ಪಳ ತಾಲೂಕಿ ಟಣಕನಕಲ್ಲ ಗ್ರಾಮದಲ್ಲಿ ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ-2015 "ಮಿಷನ್ ವಾತ್ಸಲ್ಯ"ದಡಿಯಲ್ಲಿ ಜಿಲ್ಲೆಯಲ್ಲಿ ನಿರ್ಮಾಣವಾಗುತ್ತಿರುವ ಮಕ್ಕಳ ಪಾಲನಾ ಕೇಂದ್ರಗಳಾದ "ಸರಕಾರಿ ಬಾಲಕರ ಬಾಲಮಂದಿರ ಮತ್ತು ಬಾಲಕಿಯರ ಬಾಲಮಂದಿರ" ಕಟ್ಟಡ ನಿರ್ಮಾಣ ಸ್ಥಳಕ್ಕೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ಜಿ. ರಾಮತ್ನಾಳ ಅವರು ಮಂಗಳವಾರ ಭೇಟಿ ನೀಡಿ, ಕಾಮಗಾರಿಯನ್ನು ವೀಕ್ಷಿಸಿದರು.



ಮಕ್ಕಳ ಪಾಲನಾ ಕೇಂದ್ರಗಳಲ್ಲಿ "ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳ, ಆರೈಕೆ ಮತು ರಕ್ಷಣೆ ಕೈಗೊಳ್ಳುತ್ತಿದ್ದು, ಜಿಲ್ಲೆಯಲ್ಲಿ ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಬಹಳಷ್ಟು ಮಕ್ಕಳು ಇದ್ದು, ಈ ಬಾಲಮಂದಿರಗಳು ಜಿಲ್ಲೆಗೆ ಅತ್ಯವಶ್ಯಕವಾಗಿವೆ. ಸದ್ಯ ಬಾಲಮಂದಿರಗಳು ಬಾಡಿಗೆ ಕಟ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ. ಇದನ್ನು ಗಮನಿಸಿ ಸರಕಾರವು ಎರಡು ಬಾಲ ಮಂದಿರಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆಗೊಳಿಸಿ ಮಂಜುರಾತಿ ಆದೇಶ ನೀಡಿದೆ. ಬಾಲಮಂದಿರಗಳ ನಿರ್ಮಾಣಕ್ಕೆ ಶಿಲಾನ್ಯಾಸವಾಗಿ ವರ್ಷಗಳು ಕಳೆದಿದ್ದು, ಕೇವಲ ಬಾಲಕರ ಬಾಲಮಂದಿರ ಕಟ್ಟಡವು ಬುನಾದಿ ಹಂತದಲ್ಲಿದೆ. ಬಾಲಕಿಯರ ಬಾಲಮಂದಿರವು ನಿರ್ಮಾಣ ಕಾರ್ಯ ಆರಂಭಿಸದಿರುವ ಬಗ್ಗೆ ತೀವ್ರ ಅಸಮಾದಾನವನ್ನು ವ್ಯಕ್ತಪಡಿಸಿದ ಅವರು,

ಈ ಕಟ್ಟಡಗಳ ನಿರ್ಮಾಣ ಕಾಮಗಾರಿಯನ್ನು ಶೀಘ್ರವಾಗಿ ಆರಂಭಿಸಿ, ಉತ್ತಮ ಗುಣಮಟ್ಟದ ಕಟ್ಟಡವನ್ನು ನಿರ್ಮಾಣ ಮಾಡುವಂತೆ ಕೊಪ್ಪಳ ನಿರ್ಮಿತಿ ಕೇಂದ್ರದ ಸಹಾಯಕ ಅಭಿಯಂತರರಿಗೆ ಸೂಚಿಸಿದರು. ತಪ್ಪಿದಲ್ಲಿ ನಿರ್ಮಾಣ ಕಾಮಗಾರಿಯ ಗುತ್ತಿಗೆಯನ್ನು ರದ್ದುಪಡಿಸಿ, ಬೇರೆ ಸಂಸ್ಥೆಗೆ ನೀಡುವಂತೆ ಕೊಪ್ಪಳ ಜಿಲ್ಲಾಧಿಕಾರಿಗಳಿಗೆ ವರದಿ ನೀಡುವುದಾಗಿ ಎಚ್ಚರಿಸಿದರು.

ಈ ಕಟ್ಟಡ ನಿರ್ಮಾಣ ಕಾಮಗಾರಿಗೆ ಮತ್ತು ಮುಂದಿನ ದಿನಗಳಲ್ಲಿ ಮಕ್ಕಳಿಗೆ ಅವಶ್ಯಕವಾಗಬಹುದಾದ ನೀರಿನ ಸೌಲಭ್ಯವನ್ನು ಒದಗಿಸುವಂತೆ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದರು. ಕಟ್ಟಡ ನಿರ್ಮಾಣ ಕಾಮಗಾರಿಗೆ ಜಿಲ್ಲಾಧಿಕಾರಿಗಳು ನೀಡಿರುವ ಭೂವಿಯು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಹೆಸರಿನಲ್ಲಿದ್ದು, ಕೇಂದ್ರ ಕಛೇರಿಯ ಸುತ್ತೋಲೆಯಂತೆ ಈ ಜಮೀನನ್ನು ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರುರವರ ಹೆಸರಿನಲ್ಲಿ ವರ್ಗಾಯಿಸುವಂತೆ ತಹಶೀಲ್ದಾರರಿಗೆ ತಿಳಿಸಿದರು.

ಈ ಭೇಟಿ ಅವಧಿಯಲ್ಲಿ ಕೊಪ್ಪಳ ತಹಶೀಲ್ದಾರ ವಿಠ್ಠಲ ಚೌಗಲಾ, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ, ಓಜನಹಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಹುಚ್ಚಪ್ಪ ಭೋವಿ, ಕೊಪ್ಪಳ ನಿರ್ಮಿತಿ ಕೇಂದ್ರದ ಸಹಾಯಕ ಅಭಿಯಂತರರು, ಓಜನಹಳ್ಳಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶಿವಬಸಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಉದ್ಯೋಗ ಖಾತರಿಯಡಿ ಸ್ತ್ರೀ ಚೇತನ ಅಭಿಯಾನ: ಐ.ಇ.ಸಿ. ಸಂಯೋಜಕ



**ರಾಯಚೂರು :** ಜಿಲ್ಲೆಯ ಲಿಂಗಸಗೂರು ತಾಲೂಕಿನ ಗೋರೆಬಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ಯಾರಗುಂಟ್ಟ ಕೆಂಚಮ್ಮ ಕೆರೆ ಹೂಳೆತ್ತುವ ಕಾಮಗಾರಿ ಸ್ಥಳದಲ್ಲಿ ಸ್ತ್ರೀ ಚೇತನ ಅಭಿಯಾನವನ್ನು ಕೈಗೊಂಡು ಯೋಜನೆಯ ಕುರಿತು ಮಾಹಿತಿ ನೀಡಲಾಯಿತು.

ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಬಸವರಾಜ್ ಗ್ರಾಮ ಪಂಚಾಯತ್ ಗೊರೆ ಬಾಳ ಇವರು ಮಾತನಾಡಿ ನರೇಗಾ ಯೋಜನೆಯಡಿ ಕೆಲಸ ಮಾಡುವ ಮಹಿಳೆಯರ ಪ್ರಮಾಣ ಶೇ 63.63 ರಷ್ಟಿದ್ದು, ಸ್ತ್ರೀ ಚೇತನ ಅಭಿಯಾನ ಕೈಗೊಳ್ಳುವ ಮೂಲಕ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯೋಜನೆಯ ಲಾಭ ಪಡೆಯಬೇಕು, ಹಾಗೂ ಗಂಡು ಮತ್ತು ಹೆಣ್ಣಿಗೆ ಸಮಾನ ಕೂಲಿ 370 ಇರುತ್ತದೆ ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಬಸವರಾಜ್ ಗ್ರಾಮ ಪಂಚಾಯತ್ ಗೊರೆಬಾಳ ಅವರು ಹೇಳಿದರು.

ಐಇಸಿ ಸಂಯೋಜಕರು ಮಾತನಾಡಿ,

ಏಪ್ರೀಲ್ 01 ರಿಂದ ನರೇಗಾ ಕೂಲಿ 370 ಆಗಿದ್ದು, ಇದು ಕೂಲಿಕಾರರು ಹೆಚ್ಚೆಚ್ಚು ಕೆಲಸಕ್ಕೆ ಬರುವಂತೆ ಪ್ರೇರೆಪಿಸಲು ಸಹಾಯಕವಾಗಿದೆ. ಯೋಜನೆಯಡಿ 65 ವರ್ಷ ಮೇಲ್ಪಟ್ಟ ವೃದ್ಧರಿಗೆ, ಅಂಗವಿಕಲರಿಗೆ ಹಾಗೂ ಗರ್ಭಿಣಿಯರಿಗೆ ಅರ್ಧ ಕೆಲಸ ಪೂರ್ತಿ ಕೂಲಿ ನೀಡುವುದರಿಂದ ಎಲ್ಲ ವರ್ಗದ, ವಯಸ್ಸಿನ ಜನರಿಗೆ ಪ್ರೋತ್ಸಾಹಿಸಲಾಗುತ್ತಿದೆ ಎಂದರು.

ಸ್ತ್ರೀ ಚೇತನ ಅಭಿಯಾನದಿಂದ ಹೆಚ್ಚೆಚ್ಚು ಮಹಿಳೆಯರು ನರೇಗಾ ಕೆಲಸಕ್ಕೆ ಬರುವ ಮೂಲಕ ಯೋಜನೆಯ ಸದುಪಯೋಗ ಪಡಿಸಿಕೊಳ್ಳಲು ತಿಳಿಸಿದರು.

ಈ ಸಂದರ್ಭದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಬಸವರಾಜ್, ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ವೆಂಕಟೇಶ್ ಕುಲಕರ್ಣಿ,ಐಇಸಿ ಸಂಯೋಜಕರು ಬಾಲಪ್ಪ, ತಾಂತ್ರಿಕ ಸಹಾಯಕರು ಜಾವಿದ್, ಬಿ. ಎಫ್. ಟಿ, ಹುಲಗಪ್ಪ, ಗಣಕಯಂತ್ರ ನಿರ್ವಾಹಕರು ನಾಗರಾಜ್ ಮೇಟ್ಸ್ ಹಾಗೂ ನರೇಗಾ ಕೂಲಿಕಾರ್ಮಿಕರು ಹಾಜರಿದ್ದರು.

**ವರದಿ. ಚಂದ್ರೇಗೌಡ ಹೊನ್ನಳ್ಳಿ**

# ಅನಿತಾ ಬಜಾರ್ ಮಠರಿಂದ ವಿಶೇಷ ಚೇತನರಿಗೆ ಗಾಲಿ ಕುರ್ಚಿ ಮತ್ತು ಗಾಳಿಯ ಹಾಸಿಗೆ ವಿತರಣೆ

**ಕೊಪ್ಪಳ :** ನಗರದ ಹೊರವಲಯದಲ್ಲಿರುವ ಸಾಮರ್ಥ್ಯ ಕೇಂದ್ರದಲ್ಲಿರುವ ಬಡ ನಿರ್ಗತಿಕ ವಿಶೇಷ ಚೇತನರಿಗೆ ಆರಾಮವಾಗಿ ಚಲನೆಗೆ ಸಹಾಯವಾಗಲು ವಿಶೇಷ ಚೇತನರ ಅನುಕೂಲಕ್ಕಾಗಿ ಕೊಪ್ಪಳ ಇನ್ನರ್ ವೀಲ್ ಕ್ಲಬ್ ಸದಸ್ಯರಾದ ಅನಿತಾ ಬಜಾರ್ ಮಠ ರವರು ಸುಮಾರು 18 ಸಾವಿರ ರೂಪಾಯಿ ಮೌಲ್ಯದ ಗಾಲಿ ಕುರ್ಚಿ (ವೀಲ್ ಚೇರ್ )ಮತ್ತು ಗಾಳಿಯಹಾಸಿಗೆ (ಏರ್ ಬೆಡ್)ಯನ್ನು ಕೊಡುಗೆಯಾಗಿ ನೀಡಿ ಮಾನವೀಯತೆಯನ್ನು ಎತ್ತಿ ಹಿಡಿದಿದ್ದಾರೆ. ನೀರ್ಗತಿಕ ವಿಶೇಷ ಚೇತನರ ಚಲನಶೀಲತೆಯ ಸವಾಲುಗಳನ್ನು ಎದುರಿಸುತ್ತಿರುವವರ ಜೀವನದ



ಮೇಲೆ ಬೆಂಬಲ ಬೀರುವ ಸಕರಾತ್ಮಕ ಪರಿಣಾಮವನ್ನು ತೋರಿಸುವ ಕೆಲಸ ಇದಾಗಿದೆ ಇದನ್ನು ಉಪಯೋಗಿಸುವ ಫಲಾನುಭವಿ ವಿಶೇಷ ಚೇತನರು ಗಳಿಗೆ ಸ್ವಾತಂತ್ರ್ಯ ಮತ್ತು ಜೀವನದ ಗುಣಮಟ್ಟವನ್ನು ಗಮನಾರ್ಹವಾಗಿ ಸುಧಾರಿಸುವ ನಿರೀಕ್ಷೆಯಿಂದ ಅವರಿಗೆ ಅನುಕೂಲವಾಗಲು ಸದುದ್ದೇಶದಿಂದ ಗಾಲಿ ಕುರ್ಚಿ ಮತ್ತು ಗಾಳಿಯ ಹಾಸಿಗೆಯನ್ನು ಕೊಡುಗೆಯಾಗಿ ವಿತರಿಸಿದ ಅನಿತಾ ಬಜಾರ್ ಮಠ ರವರ ಕಾರ್ಯಕ್ಕೆ ಎಲ್ಲರೂ

ಅಪಾರವಾಗಿ ಮೆಚ್ಚುಗೆ ವ್ಯಕ್ತಪಡಿಸಿ ಅವರಿಗೆ ಅಭಿನಂದಿಸಿದ್ದಾರೆ,

ಈ ಸಂದರ್ಭದಲ್ಲಿ ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ, ಕಾರ್ಯಕಾರಣಿ ಸಮಿತಿ ಸದಸ್ಯರಾದ ಡಾ, ರಾಧಾ ಕುಲಕರ್ಣಿ ಕ್ಲಬ್ಬಿನ ಸಂಪಾದಕಿ ನಾಗವೇಣಿ ಗರುರ್ ಅಲ್ಲದೆ ಸಮೂಹ ಸಂಸ್ಥೆಯ ಸಂಯೋಜಕರು ಮತ್ತಿತರರು ಪಾಲ್ಗೊಂಡಿದ್ದರು.

# ಮಾಸಾಶನ ಪಡೆಯುತ್ತಿರುವ ಸಾಹಿತಿ, ಕಲಾವಿದರು ಜೀವಂತ ಪ್ರಮಾಣ ಪತ್ರ ಸಲ್ಲಿಸಿ

**ಕೊಪ್ಪಳ :** ಮಾಸಾಶನ ಪಡೆಯುತ್ತಿರುವ ಸಾಹಿತಿ, ಕಲಾವಿದರುಗಳು ಜೀವಂತ ಪ್ರಮಾಣ ಪತ್ರ ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ ಅವರು ತಿಳಿಸಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಸಾಶನದ ಸೌಲಭ್ಯ ಪಡೆಯುತ್ತಿರುವ ಹಿರಿಯ ಸಾಹಿತಿ, ಕಲಾವಿದರು, ವಿಧವಾ ಮಾಸಾಶನದಾರರು 2025-26ನೇ ಸಾಲಿಗೆ ಸಂಬಂಧಿಸಿದ ಜೀವಂತ ಪ್ರಮಾಣ ಪತ್ರವನ್ನು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೊಪ್ಪಳ ರವರ ಕಛೇರಿಗೆ ಖುದ್ದಾಗಿ ಏಪ್ರಿಲ್ 29ರ ಒಳಗಾಗಿ ನಿಗದಿತ ನಮೂನೆಯ ಅರ್ಜಿ ಪ್ರತಿಯನ್ನು ಕಛೇರಿಯಲ್ಲಿ ಪಡೆದುಕೊಂಡು ನಿಯಮಾನುಸಾರ ಭರ್ತಿಮಾಡಿ, ಈ ಅರ್ಜಿಯಲ್ಲಿ ತಾವು ಮಾಸಾಶನ ಪಡೆಯುತ್ತಿರುವ ಬ್ಯಾಂಕ್ ಮಾನೇಜರ್ ರವರ ಸಹಿಯೊಂದಿಗೆ, ಆಧಾರ್ ಕಾರ್ಡ್ ಜೆರಾಕ್ಸ್, ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್, ಮಾಸಾಶನ ಆದೇಶ ಪ್ರತಿಯ ಜೆರಾಕ್ಸ್ ಪ್ರತಿಯನ್ನು ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

# ರಾಷ್ಟ್ರೀಯ ಸ್ವಯಂ ಸೇವಾ ಶಿಬಿರಾರ್ಥಿಗಳಿಗೆ ಗ್ರಾಮಸ್ಥರು ನೆರವಾಗಬೇಕು: ತಹಶೀಲ್ದಾರ ಬಬಲಿ

**ಮೂಡಲಗಿ :** ಇದು ಬೇಸಿಗೆಯ ಕಾಲಾವಧಿ. ಆದ್ದರಿಂದ ರಾಷ್ಟ್ರೀಯ ಸ್ವಯಂ ಸೇವಾ ಶಿಬಿರಾರ್ಥಿಗಳಿಗೆ ಸಂಘಟಕರು ಹಾಗೂ ಗ್ರಾಮಸ್ಥರು ಶಿಬಿರದ ಅವಧಿಯಲ್ಲಿ ಉತ್ತಮ ಪೌಷ್ಟಿಕ ಆಹಾರ, ಶುದ್ಧ ನೀರು, ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿ ಶಿಬಿರಾರ್ಥಿಗಳ ಸೇವಾ ಕಾರ್ಯಗಳಿಗೆ ನೆರವಾಗಬೇಕು ಎಂದು ತಹಶೀಲ್ದಾರ್ ಎಸ್. ವ್ಹಿ. ಬಬಲಿ ಕರೆ ಕೊಟ್ಟರು.

ಏಪ್ರಿಲ್ 17 ರಂದು ಅವರು ಇಲ್ಲಿಗೆ ಸಮೀಪದ ದತ್ತು ಗ್ರಾಮ ಖಾನಟ್ಟಿಯಲ್ಲಿ ಹಮ್ಮಿಕೊಂಡಿದ್ದ ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.




ಮೂಡಲಗಿ ತಾಲೂಕ ಪಶು ಸಂಗೋಪನ ಇಲಾಖೆಯ ಉಪನಿರ್ದೇಶಕರಾದ ಡಾ. ಎಮ್. ಜಿ. ವಿಭೂತಿ ಮಾತನಾಡಿ, ರಾಷ್ಟ್ರವನ್ನು ಸನ್ಮಾರ್ಗದಲ್ಲಿ ಸದೃಢವಾಗಿ ನಿರ್ಮಾಣ ಮಾಡಲು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಸರ್ಕಾರ ರಾಷ್ಟ್ರೀಯ ಸೇವಾ ಯೋಜನೆ ಜಾರಿಗೆ ತಂದಿದ್ದು ಈ ಯೋಜನೆಯ ಸದುಪಯೋಗಕ್ಕೆ ಶಾಲಾ ಕಾಲೇಜುಗಳು, ಗ್ರಾಮಸ್ಥರು ಸಹಕರಿಸಬೇಕೆಂದು ಅಭಿಪ್ರಾಯಪಟ್ಟರು.

ಹ್ೈನ್ುಗಾರಿಕ್ಂು್ುನ್ು ವಿದ್ಯಾರ್ಥಿಗಳು ಒಂದು ಸ್ವಯಂ ಉದ್ಯೋಗ ವನ್ನಾಗಿಸಿಕೊಳ್ಳಲು ಅವಕಾಶವಿದ್ದು ಈ ದಿಶೆಯಲ್ಲಿ ಯೋಜನೆಗಳನ್ನು ರೂಪಿಸಿಕೊಂಡರೆ ನಮ್ಮ ಇಲಾಖೆಯಿಂದ ಮಾರ್ಗದರ್ಶನ ಮಾಡಲಾಗುವುದು ಎಂದರು.

ಅಧ್ಯಕ್ಷ ಪರವಾಗಿ ಮಾತನಾಡಿದ ಪ್ರಾಚಾರ್ಯರಾದ ಜಿ. ವ್ಹಿ. ನಾಗರಾಜ ಏಳು ದಿನಗಳ ಕಾಲ ಈ ಶಿಬಿರದಲ್ಲಿ ಪರಿಸರ ಸಂರಕ್ಷಣೆ ಹಾಗೂ ಯುವ ಜನತೆ ಸಾಂಕ್ರಾಮಿಕ ರೋಗಗಳ ಜಾಗೃತಿ ಮತ್ತು ನಿಯಂತ್ರಣ, ಸಾರ್ವಜನಿಕ ಉಚಿತ ಮಧುಮೇಹ ಮತ್ತು ಕಣ್ಣಿನ ತಪಾಸಣೆ ಶಿಬಿರ, ಗ್ರಾಮ ಅಭಿವೃದ್ಧಿ ಮತ್ತು ಸಹಕಾರಿ ಸಂಘಗಳು ಕಾನೂನು ಸಾಕ್ಷರತಾ ಅರಿವು ನೆರವು, ಮಹಿಳಾ ಸಬಲೀಕರಣ ಹೀಗೆ ಹತ್ತು ಹಲವು ವಿಷಯಗಳ ಕುರಿತು ಶಿಬಿರದಲ್ಲಿ ಅರಿವು ಮೂಡಿಸುವ ಕೆಲಸ ಮಾಡಲಾಗುವುದು ಎಂದರು.

ಸಮಾರಂಭದ ದಿವ್ಯಸಾನಿಧ್ಯವನ್ನು ಖಾನಟ್ಟಿಯ ಶಿವಲಿಂಗೇಶ್ವರ ದೇವಸ್ಥಾನದ ಅರ್ಚಕರಾದ ಮಹಾಲಿಂಗಯ್ಯ ಪೂಜೇರಿ ವಹಿಸಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಖಾನಟ್ಟಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಬಸಲಿಂಗವ್ವ ಮುಗಳಖೋಡ ವಹಿಸಿದ್ದರು.

ಮೂಡಲಗಿ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾದ ಆರ್. ಪಿ. ಸೋನವಾಲ್ಕರ ಸಸಿಗೆ ನೀರೆರೆಯುವುದರ ಮೂಲಕ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರವನ್ನು ಉದ್ಘಾಟಿಸಿದರು. ವೇದಿಕೆ ಮೇಲೆ ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿ ಡಾ. ಎಸ್. ಎಲ್. ಚಿತ್ರಗಾರ, ಗ್ರಾಮದ ಹಿರಿಯರಾದ ಶಿವಣಪ್ಪ ತುಪ್ಪದ, ಶಂಕರ ಢೋಣಿ, ಖಾನಟ್ಟಿ ಪಿಕೆಪಿಎಸ್ ಚೇರ್ಮನ್ ಮಹಾಂತೇಶ ರಡ್ಡೇರಟ್ಟಿ ಆಸೀನರಾಗಿದ್ದರು.

ಪ್ರಾರಂಭದಲ್ಲಿ ಗೋಪಾಲ ದರೂರ ಪ್ರಾರ್ಥಿಸಿದರು. ಪ್ರಾಚಾರ್ಯ ಜಿ. ವ್ಹಿ. ನಾಗರಾಜ ಸ್ವಾಗತಿಸಿದರು. ಎನ್.ಎಸ್.ಎಸ್. ಯೋಜನೆ ಅಧಿಕಾರಿ ಡಾ. ಎಸ್. ಎಲ್. ಚಿತ್ರಗಾರ ಮಾಲಾರ್ಪಣೆ ನೆರವೇರಿಸಿದರು. ಶಿಬಿರಾರ್ಥಿಗಳಾದ ಮಲ್ಲಿಕಾರ್ಜುನ ಗಡಾದ, ಕುಮಾರಿ ಪೂಜಾ ಕಂಬಳಿ ಕಾರ್ಯಕ್ರಮವನ್ನು ಸೊಗಸಾಗಿ ನಿರ್ವಹಿಸಿದರು. ಕೊನೆಗೆ ಉಪನ್ಯಾಸಕ ಎಲ್. ಪಿ. ಹಿಡಕಲ್ ವಂದಿಸಿದರು.

ಸಮಾರಂಭದಲ್ಲಿ ಪ್ರೊ. ಎಸ್. ಸಿ. ಮಂಟೂರ, ಪ್ರೊ. ಎ. ಎಸ್. ಮೀಶಿನಾಯಿಕ, ಪ್ರೊ. ಎಮ್. ಎಸ್. ಕುಂದರಗಿ, ಪ್ರೊ. ವ್ಹಿ. ಜೆ. ಬೈರನಟ್ಟಿ. ಡಾ. ಬಿ. ಎಮ್. ಬರಗಾಲಿ, ಭಾರತಿ ತಳವಾರ, ವಿಷ್ಣು ಬಾಗಡಿ, ಪ್ರೊ. ಪಿ. ಬಿ. ಚೌಡಕಿ, ಪ್ರೊ. ಸಿದ್ಧರಾಮ ಸವಸುದ್ದಿ, ಪ್ರೊ. ಸವಿತಾ ಕೊತ್ತಲ, ಪ್ರೊ. ಪ್ರೀತಿ ಬೆಳಗಲಿ, ರಮೇಶ ಖಾನಪ್ಪಗೋಳ, ಕಲ್ಮೇಶ ಇಂಗಳೆ ಮುಂತಾದವರು ಉಪಸ್ಥಿತರಿದ್ದರು.

**ಹಾಸ್ಯಕೂಟ 11 ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಎಚ್. ಡುಂಡಿರಾಜ್ ಅಭಿಮತ**

# ಹಾಸ್ಯಕೂಟ ಹೊಸ ಹೊಸ ಹಾಸ್ಯ ಭಾಷಣಕಾರರನ್ನು ಬೆಳಕಿಗೆ ತರುತ್ತಲಿದೆ



**ಬೆಳಗಾವಿ :** ನಗೆ ಮಾತುಗಾರರಿಂದು ತುಂಬ ವಿರಳವಾಗಿದ್ದಾರೆ. ಅವರನ್ನೆ ಕರೆಯಿಸುವುದು ಅವರದ್ದೇ ಭಾಷಣ ಕೇಳವುದಾಗಿದೆ. ಆದರೆ ಹೊಸ ಹೊಸ ನಗೆಮಾತುಗಾರರನ್ನ ಗುರುತಿಸುವುದು ಅವರಿಗೆ ವೇದಿಕೆಯನ್ನು ನೀಡುತ್ತ ಅವರೊಳಗಿರುವ ಪ್ರತಿಭೆಯನ್ನ ಜನರಿಗೆ ಪರಿಚಯಿಸುತ್ತಿರುವುದು ಹೀಗೆ ಗುಂಡೇನಟ್ಟಿ ಮಧುಕರ ಅವರ ನಿರಂತರ ಪ್ರಯತ್ನದಿಂದ ಹೊಸ ಹೊಸ ಮಾತುಗಾರರು ಬೆಳಕಿಗೆ ಬರುತ್ತಲಿದ್ದಾರೆ ಎಂದು ಹನಿಗವಿ ಎಚ್. ಡುಂಡಿರಾಜ ಅವರು ಇಂದಿಲ್ಲಿ ಹೇಳಿದರು.

ನಗರದ ಹಾಸ್ಯಕೂಟ ಮತ್ತು ಕನ್ನಡ ಸಾಹಿತ್ಯ ಭವನ ವಿಶ್ವಸ್ತ ಮಂಡಳಿ ಸಂಯುಕ್ತ ಆಶ್ರಯದಲ್ಲಿ ಹಾಸ್ಯಕೂಟದ 11 ನೇ ವಾರ್ಷಿಕೋತ್ಸವ (133 ನೇ ತಿಂಗಳ ಕಾರ್ಯಕ್ರಮ) "ನಗೆ ಬೇಕರಿ - ನಗಬೇಕ್ರಿ" ಕಾರ್ಯಕ್ರಮವನ್ನು ಚೆನ್ನಮ್ಮ ವೃತ್ತದ ಬಳಿಯಿರುವ ಕನ್ನಡ ಸಾಹಿತ್ಯ ಭವನದಲ್ಲಿ ದಿ. 17 ಗುರುವಾರದಂದು ಹಮ್ಮಿಕೊಂಡಿದ್ದರು. ಪ್ರಮುಖ ಭಾಷಣಕಾರರಾಗಿ ಆಗಮಿಸಿದ್ದ ಹನಿಗವಿ ಡುಂಡಿರಾಜ ಮಾತನಾಡುತ್ತ ಮೇಲಿನಂತೆ ಅಭಿಪ್ರಾಯ ಪಟ್ಟರು.

ಮುಂದೆ ಮಾತನಾಡುತ್ತ ಡುಂಡಿರಾಜ ಅವರು ಸಂಘಟನೆಯನ್ನು ಆರಂಭಿಸುವುದು ಸುಲಭ ಆದರೆ ಮುಂದೆವರೆಸಿಕೊಂಡು ಹೋಗವುದು ತುಂಬ ಕಷ್ಟದ ಕೆಲಸ ಅಂತಹದರಲ್ಲಿ ಹಾಸ್ಯಕೂಟ ಯಶಸ್ವಿ ಹನ್ನೊಂದು ವರ್ಷಗಳನ್ನು ಪುರೈಸಿ ಹನ್ನೆರಡನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವುದು ನಿಜಕ್ಕೂ ಸಂತೋಷದ ವಿಷಯ ಎಂದು ತಮ್ಮ ಭಾಷಣದುದ್ದಕ್ಕೂ ಅಲ್ಲಲ್ಲಿ ಹನಿಗವನಗಳನ್ನು ಹೇಳುತ್ತ ಜನರನ್ನು ರಂಜಿಸಿದರು ಉದಾಹರಣೆಗೆಂದರೆ- "ಜಗತ್ತಿನಲ್ಲಿ ಇರುವುದೇ/ ಎರಡು ರೀತಿಯ ಗಂಡಂದಿರು/ ಹೆಂಡತಿಯರಿಗೆ ಹೆದರುವವರು/ ಮತ್ತು ಹೆದರುವುದಿಲ್ಲ ಎಂದು ಸುಳ್ಳು ಹೇಳುವವರು!!"

ಅಧ್ಯಕ್ಷತೆಯನ್ನು ವಹಿಸಿದ್ದ ಹಿರಿಯ ಪತ್ರಕರ್ತ ಎಲ್. ಎಸ್. ಶಾಸ್ತ್ರಿ, ಉದಯೋನ್ಮುಖ ಕವಿಗಳು ಹಿರಿಯ ಕವಿಗಳಾದ ಡಾ. ಜಿನದತ್ತ ದೇಸಾಯಿ, ಎಚ್ ಡುಂಡಿರಾಜ್, ದಿನಕರ ದೇಸಾಯಿ ಮುಂತಾದ ಕವಿಗಳ ಕವಿತೆಗಳನ್ನು ಓದಿ ಸತತಾಭ್ಯಾಸ ಮಾಡುವುದರಿಂದ ಒಳ್ಳೆಯ ಕವಿತೆಗಳನ್ನು ಬರೆಯಲು ಸಾಧ್ಯ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಂಗಸಂಪದದ ಅಧ್ಯಕ್ಷ ಡಾ. ಅರವಿಂದ ಕುಲಕರ್ಣಿಯವರು, ಡುಂಡಿರಾಜರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ರಚನೆ ಮಾಡಿದ್ದರೂ ಸಹ ಕೇವಲ ಹನಿಗವಿಯಂದೇ ಚಿರಪರಿಚಿತರು.

ಇವರು ಉತ್ತಮ ನಾಟಗಳನ್ನು ರಚಿಸಿದ್ದಾರೆ. ಇತ್ತೀಚೆಗೆ ಇವರ 'ಪುಕ್ಕಟ ಸಲಹೆ' ಎನ್ನುವ ನಗೆ ನಾಟಕ ನೂರು ಪ್ರಯೋಗಗಳನ್ನು ಕಂಡಿದೆ. ರಂಗಸಂಪದ ತಂಡದಿಂದ ಅದೇ ನಾಟಕವನ್ನಾಡುವ ಯೋಜನೆಯನ್ನು ಹೊಂದಿದೆ ಎಂದು ಹೇಳಿದರು.

ಹಾಸ್ಯಕೂಟ ಸಂಚಾಲಕ ಗುಂಡೇನಟ್ಟಿ ಮಧುಕರ ಮಾತನಾಡುತ್ತ ಹಾಸ್ಯಕೂಟ ಬೆಳೆದುಬಂದ ದಾರಿ ಮತ್ತು ಡುಂಡಿರಾಜ್ ರೊಂದಿಗಿನ ಒಡನಾಟವನ್ನು ಹಂಚಿಕೊಂಡರು.

ಹಿರಿಯ ಜನಪ್ರಿಯ ನಗೆ ಮಾತುಗಾರ ಪ್ರೊ. ಜಿ. ಕೆ. ಕುಲಕರ್ಣಿ ಮತ್ತು ಯುವ ಪ್ರತಿಭೆ ಕೆ. ತಾನಾಜಿ ತಮ್ಮ ಮಾತುಗಳಿಂದ ಜನರನ್ನು ರಂಜಿಸಿದರು. ಕಾರ್ಯಕ್ರಮದ ಪ್ರಾಯೋಜಕತ್ವವನ್ನು ಎಸ್.ಬಿ.ಐ ನಿವೃತ್ತ ಶಾಖಾಧಿಕಾರಿ ಅರವಿಂದ ಹುನಗುಂದ ವಹಿಸಿಕೊಂಡಿದ್ದರು. ಎಂ.ಬಿ.ಹೊಸಳ್ಳಿ ನಿರೂಪಿಸಿದರು.

## ಸಿದ್ದಪ್ಪ ಗುಡದನ್ನವರ ನಿಧನ



**ಮೂಡಲಗಿ :** ತಾಲೂಕಿನ ಗುಲಗುಂಜಿಕೊಪ್ಪ ಗ್ರಾಮದ ಸಿದ್ದಪ್ಪ ಭೀಮಪ್ಪ ಗುಡದನ್ನವರ ತಮ್ಮ 65 ನೆಯ ವಯಸ್ಸಿನಲ್ಲಿ ಏಪ್ರಿಲ್ 17 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಪತ್ನಿ, ಮೂವರು ಸುಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಸಂಜೀವಿನಿ ಫೌಂಡೇಶನ್ ವೃದ್ಧಾಶ್ರಮಕ್ಕೆ ಉಪ ಮಹಾಪೌರರ ಭೇಟಿ

**ಬೆಳಗಾವಿ :** ಬೆಳಗಾವಿ ವಡಗಾವದಲ್ಲಿರುವ ಸಂಜೀವಿನಿ ಫೌಂಡೇಶನ್ ವೃದ್ಧಾಶ್ರಮಕ್ಕೆ ಬೆಳಗಾವಿಯ ಉಪ ಮಹಾಪೌರರಾದ ಶ್ರೀಮತಿ. ವಾಣಿ ವಿಲಾಸ್ ಜೋಶಿ ಅವರು ಇಂದು ಭೇಟಿ ನೀಡಿ ಹಿರಿಯ ಪತ್ರಕರ್ತೆ ಶ್ರೀಮತಿ. ಸುಧಾ ಪಟ್ಟೇದಅವರ 80 ನೇ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದರು.



ಕಳೆದ ಒಂದುದಶಕಕ್ಕೂ ಅಧಿಕ ಕಾಲದಿಂದ ಕಾರ್ಯನಿರ್ವಹಿಸುತ್ತಿರುವ ಸಂಜೀವಿನಿ ಫೌಂಡೇಶನ್‌ದಲ್ಲಿ ಸದ್ಯಕ್ಕೆ 45ಕ್ಕೂ ಹೆಚ್ಚು ಆಶ್ರಮವಾಸಿಗಳಿದ್ದಾರೆ. ಅದರಲ್ಲಿ 99 ವರ್ಷದ ಹಿರಿಯರು ಕೂಡ ಇದ್ದಾರೆ. ಇಲ್ಲಿ ಅವರಿಗೆ ಆರೋಗ್ಯದ ಮೇಲುಸ್ತುವಾರಿ ಕೂಡ ಸೂಕ್ತ ಸಮಯದಲ್ಲಿ ಲಭ್ಯವಾಗುತ್ತದೆ ಎಂದು ಸಂಜೀವಿನಿ ಫೌಂಡೇಶನ್ ಸಂಚಾಲಕಿ ಶ್ರೀಮತಿ.ಸವಿತಾ ಅವರು ಈ ಸಂದರ್ಭದಲ್ಲಿ ಹೇಳಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಮದನ್ ಬಾಮಣೆ ಅವರು ಮಾತನಾಡಿ ಎಲ್ಲ ರೀತಿಯ ಸೌಲಭ್ಯಗಳನ್ನು ನೀಡಲಾಗುತ್ತಿದೆ ಎಂದು ಹೇಳಿದರು.

ಬೆಂಗಳೂರಿನ ಶ್ರೀಮತಿ.ಪಾರ್ವತಿ ಚೌದರಿ, ಹಿರಿಯ ಪತ್ರಕರ್ತರಾದ ವಿಲಾಸ್ ಜೋಶಿ, ಮುರುಗೇಶ್ ಶಿವಪೂಜಿ, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಹಗ್ಗ ಇಲ್ಲದೆ ಚಲಿಸಿದ ಸುಣಧೋಳಿಯ ಜಡಿಸಿದ್ಧೇಶ್ವರ ರಥ




**ಮೂಡಲಗಿ :** ಸಮೀಪದ ಸುಣಧೋಳಿ ಗ್ರಾಮದ ಘಟಪ್ರಭೆ ನದಿ ತೀರದ ಪುಣ್ಯ ಪುರುಷ ಶ್ರೀ ಜಡಿಸಿದ್ಧೇಶ್ವರ ಜಾತ್ರೆಯು ಈಗಿನ ಪೀಠಾಧಿಪತಿ ಶಿವಾನಂದ ಮಹಾಸ್ವಾಮಿಜಿಯವರ ಸಾನಿಧ್ಯದಲ್ಲಿ ಸಂಭ್ರಮದಿಂದ ಜರುಗಿತು. ಜಾತ್ರೆಯ ಅಂಗವಾಗಿ ಬುಧವಾರ ಬೆಳಿಗ್ಗೆ ಆರಕ್ಕೆ ಜಡಿಸಿದ್ಧೇಶ್ವರ ಸನ್ನಿಧಿಗೆ ವಿಶೇಷ ಪೂಜೆ, ಅಭಿಷೇಕಗಳು ಜರುಗಿದವು. ದೇವಸ್ಥಾನದಿಂದ ಮೂರ್ತಿಯನ್ನು ತಂದು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಸಂಚರಿಸಿ ಸಕಲ ವಾದ್ಯ ಮೇಳದೊಂದಿಗೆ ರಥದಲ್ಲಿ ಪ್ರತಿಷ್ಠಾಪಿಸಿದರು.

ಸುಣಧೋಳಿ ಸೇರಿದಂತೆ ಸುತ್ತಮುತ್ತಲಿನ ಹಲವಾರು ಗ್ರಾಮಗಳಿಂದ ಆಗಮಿಸಿದ್ದ ವಿವಿಧ ಗ್ರಾಮಗಳ ದೇವರುಗಳ ಪಲ್ಲಕ್ಕಿಗಳು ಇಲ್ಲಿ ಸೇರುತ್ತವೆ. ವಾಲಗ, ಶಹನಾಯಿ, ತಮಟೆ, ಝಾಂಜ ಪಥಕ, ಡೊಳ್ಳು ಹೀಗೆ ಭಾರತೀಯ ವಿವಿಧ ಸಂಸ್ಕೃತಿಯ ಸಂಗೀತದ ನಾದಗಳ ಜೊತೆ ಭಕ್ತರ ಮುಗಿಲು ಮುಟ್ಟುವ 'ಹರಹರ ಮಹಾದೇವ' ಘೋಷಣೆಯೊಂದಿಗೆ ಹಗ್ಗವಿಲ್ಲದೆ ರಥ ಸಾಗುತ್ತದೆ. ರಥದ ಮೇಲೆ ಭಕ್ತರು ಇಷ್ಟಾನುಸಾರ ತೆಂಗಿನಕಾಯಿ, ಬಾಳೆಹಣ್ಣು, ಖಾರೀಕು, ಬತ್ತಾಸು ಹಾಗೂ ಹೂವನ್ನು ಸಮರ್ಪಿಸಿ ಕೃತಾರ್ಥರಾದರು. ಜಾತ್ರೆಗೆ ಕರ್ನಾಟಕ ಸೇರಿದಂತೆ ನೆರೆಯ ರಾಜ್ಯಗಳಿಂದಲೂ ಭಕ್ತರ ಸಮೂಹವು ಬಂದು ಸೇರುತ್ತದೆ. ಈ ಮಠವು ಭಾವೈಕ್ಯತೆಗೂ ಹೆಸರುವಾಸಿಯಾಗಿದೆ. ಈ ಮಠಕ್ಕೆ ಜಾತಿ, ಮತ, ಧರ್ಮ ಎಂಬ ಬೇದ ಮಾಡದೇ ಎಲ್ಲ ಭಕ್ತರು ಆಗಮಿಸುತ್ತಾರೆ.

ನಂತರ ಮಹಾಪ್ರಸಾದದಲ್ಲಿ ಮೇಲು ಕೀಳು ಎನ್ನದೆ ಸಾವಿರಾರು ಭಕ್ತರು ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾದರು.

# ನಾಲ್ಕನೇ ದಿನವೂ ಮುಂದುವರೆದ ಸಿಐಡಿ ತನಿಖೆ



**ಮಹಾಲಿಂಗಪುರ :** ಪುರಸಭೆ ಗಲಾಟೆ ಪ್ರಕರಣದ ಕುರಿತು ಸಿಐಡಿ ತಂಡದ ತನಿಖಾಧಿಕಾರಿ ಪ್ರಭಾವತಿ ಪಾಂಡುರಂಗ ನೇತೃತ್ವದ ತಂಡವು ಶುಕ್ರವಾರ ನಾಲ್ಕನೇ ದಿನವೂ ತನಿಖೆ ಮುಂದುವರೆಸಿತ್ತು. ಮುಂಜಾನೆ 10 ರಿಂದ ರಾತ್ರಿ 11 ರವರೆಗೆ ಹಲವರ ವಿಚಾರಣೆ ನಡೆಸಿತು. ಶುಕ್ರವಾರ ಬಸವನ ಬಾಗೇವಾಡಿ ಮುಖ್ಯಾಧಿಕಾರಿ ಎಚ್. ಎಸ್. ಚಿತ್ತರಗಿ, ಸ್ಥಳಿಯ ಪುರಸಭೆ ಸದಸ್ಯರಾದ ಪ್ರಲ್ಹಾದ ಸಣ್ಣಕ್ಕಿ, ಬಸವರಾಜ ಚಮಕೇರಿ, ಬಸವರಾಜ ಹಿಟ್ಟಿನಮಠ, ಸರಸ್ವತಿ ರಾಮೋಜಿ, ಸ್ನೇಹಲ್ ಅಂಗಡಿ, ಬಸವರಾಜ ಯರಗಟ್ಟಿ, ಬಲವಂತಗೌಡ ಪಾಟೀಲ, ಬಿಜೆಪಿ ಮುಖಂಡರಾದ ಮಹಾಂತೇಶ ಹಿಟ್ಟಿನಮಠ, ಬಸನಗೌಡ ಪಾಟೀಲ, ಅಶೋಕಗೌಡ ಪಾಟೀಲ, ಪ್ರಕಾಶ ಕೋಳಿಗುಡ್ಡ, ಸೈದಾಪೂರ ಗ್ರಾಮ ಪಂಚಾಯತ್ ಅಧ್ಯಕ್ಷ ಮಹಾಲಿಂಗಪ್ಪ ಸನದಿ, ಬಸವರಾಜ ಮೇಲಪ್ಪಗೋಳ, ಕೃಷ್ಣಗೌಡ ಪಾಟೀಲ, ಅಶೋಕ ಅಂಗಡಿ, ಶ್ರೀಶೈಲ ಅಂಗಡಿ, ಅರ್ಜುನ ಮೋಪಗಾರ ಸೇರಿದಂತೆ ಹದಿನಾರಕ್ಕೂ ಅಧಿಕ ಜನರ ವಿಚಾರಣೆ ನಡೆಸಿದರು.

ಶನಿವಾರ ಪೊಲೀಸರ ವಿಚಾರಣೆ :

ಇಂದು ಶನಿವಾರವೂ ಕೂಡ ತನಿಖೆಯು ಮುಂದುವರೆಯಲಿದೆ. ಸಿಪಿಐ ಎಚ್. ಆರ್. ಪಾಟೀಲ, ಪಿ.ಎಸ್.ಐ. ಗಿರಿಮಲ್ಲ ಉಪ್ಪಾರ ಸೇರಿದಂತೆ ಇನ್ನೂ ಹಲವು ಪೋಲಿಸ್ ಪೇದೆಗಳು ವಿಚಾರಣೆಗೆ ಹಾಜರಾಗಲಿದ್ದಾರೆ ಎನ್ನಲಾಗಿದೆ.

# ಮಹಾಲಿಂಗಪುರ ಪುರಸಭೆ ಗಲಾಟೆ ಪ್ರಕರಣ

## ಉಚ್ಚಾಟಿತ ಬಿಜೆಪಿ ಸದಸ್ಯರ ಹೇಳಿಕೆಗಳ ಮೇಲೆ ಪ್ರಕರಣದ ಭವಿಷ್ಯ ನಿರ್ಧಾರ

## ಅಂದು ಪ್ರತಿಭಟನೆಗೆ ಆಗಮಿಸಿದ್ದವರೇ ಇಂದು ಸಿಎಂ, ಡಿಸಿಎಂ! : ಕೇಸ್ ಇತ್ಯರ್ಥ ಎಂದು ?

ವರದಿ: ಚಂದ್ರಶೇಖರ ಮೋರೆ.

**ಮಹಾಲಿಂಗಪುರ :** ಪಟ್ಟಣದ ಪುರಸಭೆ ಅಧ್ಯಕ್ಷ ಖುರ್ಚಿಗಾಗಿ 2020 ನವೆಂಬರ್ 9 ರಂದು ತೇರದಾಳ ಶಾಸಕ ಸಿದ್ದು ಸವದಿ ಮತ್ತು ಬಿಜೆಪಿ ಸದಸ್ಯರಿಂದ ನಡೆದ ಮೂವರು ಮಹಿಳಾ ಸದಸ್ಯರ ಎಳೆದಾಟ, ಗಲಾಟೆ ಪ್ರಕರಣ ನಡೆದು ನಾಲ್ಕೂವರೆ ವರ್ಷ ಕಳೆದಿದ್ದರೂ ಇನ್ನೂ ಮುಗಿಯದೇ ಉಭಯ ಪಕ್ಷಗಳ ಸದಸ್ಯರು, ಮುಖಂಡರು, ಕಾರ್ಯಕರ್ತರು ನ್ಯಾಯಾಲಯ, ಸಿಐಡಿ ಕಚೇರಿಗೆ ಅಲೆದಾಡುವದು ಮಾತ್ರ ಇಂದಿಗೂ ತಪ್ಪಿಲ್ಲ.

**2020 ರಲ್ಲಿ ಗಲಾಟೆ–2024 ರಲ್ಲಿ ಸ್ಪರ್ಧಿಸಿಲ್ಲ:** ಪುರಸಭೆ ಅಧಿಕಾರ, ಪಕ್ಷದ ಪ್ರತಿಷ್ಠೆಗಾಗಿ 2020 ರ ಅಧ್ಯಕ್ಷ ಚುನಾವಣೆಯಲ್ಲಿ ಮಹಿಳಾ ಸದಸ್ಯೆಯರ ಎಳೆದಾಟ ಮತ್ತು ಓರ್ವ ಸದಸ್ಯೆಯ ಅಪಹರಣ ಮಾಡಿದ್ದ ಸ್ಥಳೀಯ ಬಿಜೆಪಿ ಪಕ್ಷವು 2024 ಅಗಸ್ಟ್ 23 ರಂದು ನಡೆದ ಅಧ್ಯಕ್ಷ ಚುನಾವಣೆಯಲ್ಲಿ ಶಾಸಕರು–ಸಂಸದರು ಸೇರಿ 12 ಜನ ಸದಸ್ಯರಿದ್ದರೂ ಕೂಡ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸದೇ ಕಣದಿಂದ ಹಿಂದೆ ಸರಿದಿದ್ದು ವಿಪರ್ಯಾಸದ ಸಂಗತಿ ಮತ್ತು ಹೊಂದಾಣಿಕೆ ರಾಜಕಾರಣಕ್ಕೆ ಉದಾಹರಣೆಯಾಗಿದೆ.

ಕೇಸ್ ಹಾಕಿಸಿಕೊಂಡವರ ಉಚ್ಚಾಟನೆ :

2024 ರ ಅಧ್ಯಕ್ಷ ಚುನಾವಣೆಯಲ್ಲಿ ಬಿಜೆಪಿ ಸ್ಪರ್ಧಿಸದೇ ಇರುವ ವಿಷಯಕ್ಕಾಗಿ ನಡೆದ ಶಾಸಕರು ಮತ್ತು ಸದಸ್ಯರ ನಡುವಿನ ರಾಜಕೀಯ ಸಂಘರ್ಷದಲ್ಲಿ, ಅಂದು ಅಧಿಕಾರಕ್ಕಾಗಿ ಗಲಾಟೆ ಪ್ರಕರಣದಲ್ಲಿ ಭಾಗಿಯಾಗಿ ಕೇಸ್ನಲ್ಲಿ A 2 ದಿಂದ A 5 ವರೆಗೆ ಇರುವ ಪ್ರಮುಖ ಆರೋಪಿತರು, ಸದಸ್ಯರಾದ ರವಿ ಜವಳಗಿ, ಪ್ರಲ್ಹಾದ ಸಣ್ಣಕ್ಕಿ, ಬಸವರಾಜ ಹಿಟ್ಟಿನಮಠ, ಬಸವರಾಜ ಚಮಕೇರಿ, ಸರಸ್ವತಿ ರಾಮೋಜಿ, ಲಕ್ಷ್ಮಿ ಮುದ್ದಾಪೂರ ಸೇರಿ ಆರು ಜನ ಸದಸ್ಯರು ಬಿಜೆಪಿ ಪಕ್ಷದಿಂದ ಉಚ್ಚಾಟನೆಗೊಂಡಿದ್ದಾರೆ.




**ಪ್ರತಿಭಟನೆಗೆ ಆಗಮಿಸಿದ್ದವರೇ ಇಂದು ಸಿಎಂ, ಡಿಸಿಎಂ**

**ಪುರಸಭೆ ಗಲಾಟೆಯು ತೀವ್ರ ಸ್ವರೂಪ ಪಡೆದ ಹಿನ್ನೆಲೆಯಲ್ಲಿ 5 ಡಿಸೆಂಬರ್ 2020 ರಂದು ಇಂದಿನ ಸಿ.ಎಂ. ಸಿದ್ದರಾಮಯ್ಯ, ಡಿಸಿಎಂ ಡಿ. ಕೆ. ಶಿವಕುಮಾರ ಅವರು ಮಹಾಲಿಂಗಪುರಕ್ಕೆ ಆಗಮಿಸಿ ಶಾಸಕ ಸಿದ್ದು ಸವದಿ ಮತ್ತು ಬಿಜೆಪಿ ಸರ್ಕಾರದವಿರುದ್ಧಬೃಹತ್ ಪ್ರತಿಭಟನೆನಡೆಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಗೆ ಒತ್ತಾಯಿಸಿದ್ದರು. ಮೂರು ಮಹಿಳಾ ಸದಸ್ಯೆಯರ ಪರ ಅಂದು ಹೋರಾಟ ಮಾಡಿದ್ದ ಸಿದ್ದರಾಮಯ್ಯ ಮತ್ತು ಡಿಕೆಶಿಯವರೇ ಇಂದು ರಾಜ್ಯದ ಸಿಎಂ, ಡಿಸಿಎಂಇರುವಕಾರಣ, ಸದ್ಯನಡೆಯುತ್ತಿರುವ ಮರು ತನಿಖೆಯ ಸಿಐಡಿಯ ಮೂರನೇ ವಿಚಾರಣೆಯಲ್ಲಿ ಪ್ರಕರಣ ಇತ್ಯರ್ಥವಾಗಿ ನಮಗೆ ನ್ಯಾಯ ಸಿಗುತ್ತದೆ ಎಂಬ ವಿಶ್ವಾಸವಿದೆ.**

**। ಚಾಂದನಿ ನಾಗೇಶ ನಾಯಕ, ಮರು ತನಿಖೆಗೆ ಒತ್ತಾಯಿಸಿದ ಪುರಸಭೆ ಸದಸ್ಯೆ.**

ಶಾಸಕರ ವಿರುದ್ಧ ಹೇಳಿಕೆ ? :

ಪ್ರಸ್ತುತ ವಿಚಾರಣೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳ ಮುಂದೆ ಈ ಆರು ಜನ ಅನರ್ಹ ಸದಸ್ಯರು ಸಹಜವಾಗಿ ಬಿಜೆಪಿ ಪಕ್ಷದ ಮತ್ತು ಶಾಸಕ ಸಿದ್ದು ಸವದಿ ಅವರ ವಿರುದ್ದವಾಗಿಯೇ ಹೇಳಿಕೆ ನೀಡಿರಬಹುದು ಎನ್ನಲಾಗುತ್ತಿದೆ.

ಇವರ ಹೇಳಿಕೆ ಆಧಾರದ ಮೇಲಿಯೇ ಸಿಐಡಿ ಪ್ರಕರಣದ ಭವಿಷ್ಯ ನಿರ್ಧಾರವಾಗಲಿದೆ ಎಂದು ಹೆಸರು ಹೇಳಲಿಚ್ಚಿಸದ ಕೆಲ ಕಾಂಗ್ರೆಸ್ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಂಚಲನ ಮೂಡಿಸಿದ ಸದಸ್ಯನ ಪ್ರಕಟನೆ :

ಪ್ರಕರಣದ A 2 ಆರೋಪಿ, ಅನರ್ಹ ಬಿಜೆಪಿ ಸದಸ್ಯ ರವಿ ಜವಳಗಿ ಅವರು ಸಿಐಡಿ ವಿಚಾರಣೆ ಪ್ರಾರಂಭವಾದ ನಂತರ ಶಾಸಕರು ಮತ್ತು ಬಿಜೆಪಿ ಕೆಲ ಮುಖಂಡರ ಹೇಳಿಕೆಯಿಂದಲೇ ನಾವು ಗಲಾಟೆ ಪ್ರಕರಣದಲ್ಲಿ ಭಾಗಿಯಾಗಿದ್ದೆವು. ಅವರ ಒತ್ತಾಯದಿಂದಲೇ ನಮ್ಮ ಇಬ್ಬರು ಸದಸ್ಯರು ಕಾಂಗ್ರೆಸ್ ಸದಸ್ಯರ ಮೇಲೆ ಸುಳ್ಳು ಕೇಸ್ ದಾಖಲಿಸಿದ್ದರು. ಪಕ್ಷ ಮತ್ತು ಇನ್ನೊಬ್ಬರ ಅಧಿಕಾರಕ್ಕಾಗಿ ಕೋರ್ಟ, ಸಿಐಡಿ ಕಚೇರಿಗೆ ಅಲೆದಾಡುತ್ತಿರುವದು ತಪ್ಪಿಲ್ಲ.

ಕಳೆದ ಅಧ್ಯಕ್ಷ ಚುನಾವಣೆ ವೇಳೆ ನಿಜವಾಗಿ ಕಾಂಗ್ರೆಸ್ಗೆ ಬುಕ್ ಆದವರನ್ನು ಬಿಟ್ಟು, ಪಕ್ಷಕ್ಕೆ ಬದ್ದರಾದ ನಮ್ಮ ಆರು ಜನ ಸದಸ್ಯರನ್ನು ಶಾಸಕರು, ಬಿಜೆಪಿ ಮುಖಂಡರು ಉಚ್ಚಾಟನೆ ಮಾಡಿಸಿದ್ದಾರೆ. ಯಾರು ಬುಕ್ ಆಗಿದ್ದರು, ಯಾರು ಪಕ್ಷದ ಪರ ಇದ್ದರು ಎಂಬ ಸತ್ಯ ಇಡೀ ಊರಿಗೆ ಗೊತ್ತಿದೆ. ನಮ್ಮನ್ನು ಉಚ್ಚಾಟನೆ ಮಾಡಿದ್ದು ಬೇಜಾರಿಲ್ಲ. ಪಕ್ಷ ಇರದಿದ್ದರೂ ಸಂಘದ ಕಾರ್ಯ, ಹಿಂದುತ್ವದ ಕಾರ್ಯ, ಸಾಮಾಜಿಕ ಸೇವೆ ಮಾಡಲು ಸಾಕಷ್ಟು ಅವಕಾಶಗಳಿವೆ ಎಂಬ ತಮ್ಮ ಅನಿಸಿಕೆಯ ಪ್ರಕಟನೆಯನ್ನು 2020 ರ ಗಲಾಟೆ ವಿಡಿಯೋ ಸಹಿತ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡು ಬಿಜೆಪಿ ಮುಖಂಡರು, ಶಾಸಕ ಸವದಿ ವಿರುದ್ಧ ತಮ್ಮ ಆಕ್ರೋಶವನ್ನು ಬಹಿರಂಗ ಪಡಿಸಿದ್ದಾರೆ. ಇದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ, ತೇರದಾಳ ಮತಕ್ಷೇತ್ರದಲ್ಲಿ ಸಂಚಲನ ಮೂಡಿಸಿದೆ. ಜೊತೆಗೆ ಸಿಐಡಿ ಅಧಿಕಾರಿಗಳಿಗೂ ಸದರಿ ಕೇಸ್ಗೆ ಒಂದು ಲಿಖಿತ ಸಾಕ್ಷಿಯಾಗಿ ಪರಿಗಣಿಸಿದೆ ಎನ್ನಲಾಗುತ್ತಿದೆ.

# ಸಿಇಟಿ ಪರೀಕ್ಷೆಯಲ್ಲಿ ಜನಿವಾರಕ್ಕೆ ಅಡ್ಡಿ: ಬಿಟಿಎಸ್ ಸೇರಿ ಬ್ರಾಹ್ಮಣ ಸಂಘಟನೆಗಳ ಖಂಡನೆ

**ಬಾಗಲಕೋಟೆ :** ಶಿವಮೊಗ್ಗ ಹಾಗೂ ಬೀದರ್ನಲ್ಲಿ ಯಜ್ಞೋಪವಿತ (ಜನಿವಾರ) ಧರಿಸಿದ್ದಕ್ಕೆ ಸಿಇಟಿ ಪರೀಕ್ಷೆ ಬರೆಯಲು ವಿದ್ಯಾಥಿ9ಗೆ ಪ್ರವೇಶ ನಿರಾಕರಿಸಿದ ನಾಚಿಗೇಡಿನ ಹಾಗೂ ಸಂತಾಪಜನಕ ಸಂಗತಿಯಾಗಿದೆ. ಈ ವಿಚಾರದಲ್ಲಿ ತಪ್ಪು ಎಸಗಿದವರನ್ನು ಅಮಾನತ್ ಗೊಳಿಸುವುದರೊಂದಿಗೆ ಅವರ ಮೇಲೆ ಧಾರ್ಮಿಕ ಭಾವನೆಗೆ ಧಕ್ಕೆ ತಂದಿರುವ ಪ್ರಕರಣ ದಾಖಲಿಸಿ ಕೂಡಲೇ ಬಂಧಿಸಬೇಕೆಂದು ಬ್ರಾಹ್ಮಣ ತರುಣ ಸಂಘದ ಅಧ್ಯಕ್ಷ ನಾರಾಯಣ ದೇಸಾಯಿ ಒತ್ತಾಯಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಪರೀಕ್ಷೆಯನ್ನು ಬಿಗಿಗೊಳಿಸುವ ನೆಪದಲ್ಲಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಪ್ರಯತ್ನಗಳು ಪದೇ ಪದೇ ನಡೆಯುತ್ತಲೇ ಇದೆ. ಈಗ ಅದು ಅತಿರೇಕಕ್ಕೆ ತಲುಪಿದೆ. ಬೀದರ್ನಲ್ಲಿ ಜನಿವಾರ ತೆಗೆಯಲು ಒಪ್ಪದ ವಿದ್ಯಾರ್ಥಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಿಲ್ಲ. ಧಾರ್ಮಿಕ ಆಚರಣೆಗೆ ಅಡ್ಡಿಪಡಿಸಲು ಯಾರಿಗೂ ಅಧಿಕಾರವಿಲ್ಲ. ಸರ್ಕಾರದ ಆದೇಶ ಇಲ್ಲದಿದ್ದರೂ ಅಧಿಕಾರಿಗಳು ಈ ರೀತಿ ತಪ್ಪು ಎಸಗಿರುವುದು ಏಕೆ ?

ಸಿಇಟಿ ಬರೆಯದೆ ವಾಪಸ್ ಬಂದ ಆ ವಿದ್ಯಾರ್ಥಿಯ ಇಂಜನಿಯರಿಂಗ್ ಕನಸು ಭಗ್ನಗೊಂಡಿದೆ. ಅಧಿಕಾರಿಗಳ ಅಕ್ಷಮ್ಯ ಎಡವಟ್ಟಿನಿಂದ ಆತ ಪರೀಕ್ಷೆ ಬರೆಯದ ಕಾರಣ ಸರ್ಕಾರ ಆತನ ವ್ಯಾಸಂಗಕ್ಕೆ ಸೂಕ್ತ ಅವಕಾಶ ಮಾಡಿಕೊಡಬೇಕು. ಅಲ್ಲದೇ ತಪ್ಪಿತಸ್ಥ ಅಧಿಕಾರಿಗಳು, ಸಿಬ್ಬಂದಿಯನ್ನು ಕೇವಲ ಅಮಾನತ್ತಿನಲ್ಲಿಟ್ಟರೆ ಸಾಲದು, ಅವರನ್ನು ಜೈಲಿಗಟ್ಟುವ ಕೆಲಸವಾಗಬೇಕೆಂದು ಅವರು ಆಗ್ರಹಿಸಿದ್ದಾರೆ. ಘಟನೆಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ಹಾಗೂ ವಿಶ್ವ ಮಧ್ವ ಮಹಾಪರಿಷತ್ಗಳು ಸಹ ಖಂಡಿಸಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿವೆ.

# ವಿಜೃಂಭಣೆಯಿಂದ ನಡೆದ ಜಗದಾಳ ದುರ್ಗಾದೇವಿಯ ಜಾತ್ರಾ ಮಹೋತ್ಸವ

## 85 ಕ್ಕೂ ಹೆಚ್ಚು ಕ್ವಿಂಟಾಲ್ ಆಹಾರ ಧಾನ್ಯ ಬಳಕೆ। ಸಾವಿರಾರು ಜನರಿಗೆ ಅನ್ನ ಪ್ರಸಾದ



**ರಬಕವಿ–ಬನಹಟ್ಟಿ :** ಸಮೀಪದ ಜಗದಾಳ ಗ್ರಾಮದ ಭಟ್ಟಡ ಫಾರ್ಮ್ ಹೌಸ್ ನಲ್ಲಿರುವ ದುರ್ಗಾ ದೇವಿಗೆ ಉಡಿ ತುಂಬುವ ಕಾರ್ಯ ಮತ್ತು ಜಾತ್ರಾ ಮಹೋತ್ಸವ ಶುಕ್ರವಾರ ವಿಜೃಂಭಣೆಯಿಂದ ಜರುಗಿತು.

ದೇವಿಗೆ ಉಡಿ ತುಂಬುವ ಕಾರ್ಯಕ್ರಮದ ಅಂಗವಾಗಿ ಭಕ್ತರು ಬೆಳಗಿನ ಜಾವದಿಂದ ದೀಡ ನಮಸ್ಕಾರ ಹಾಕಿ ಹರಕೆ ಪೂರೈಸಿದರು. ಬೆಳಿಗ್ಗೆ ದೇವಸ್ಥಾನದಲ್ಲಿ ಅಭಿಷೇಕ, ವಿಶೇಷ ಪೂಜೆಯ ನಂತರ ಮೂರ್ತಿಗೆ ಬೆಳ್ಳಿಯ ಅಲಂಕಾರ ಪೂಜೆಯನ್ನು ಮಾಡಲಾಗಿತ್ತು.

ಸಂಜೆ ದೇವಸ್ಥಾನದ ಆವರಣದಲ್ಲಿ ದುರ್ಗಾ ದೇವಿಯ ಪಲ್ಲಕ್ಕಿ ಉತ್ಸವ ನಡೆಯಿತು. ದೇವಸ್ಥಾನವನ್ನುಹೂ ಮಾಲೆಗಳಿಂದಶೃಂಗರಿಸಲಾಗಿತ್ತು. ರಬಕವಿ, ಬನಹಟ್ಟಿ, ಜಮಖಂಡಿ, ಹಾಗೂ ಮುಧೋಳ ತಾಲ್ಲೂಕಿನ ನಗರಮತ್ತುಗ್ರಾಮೀಣಪ್ರದೇಶಗಳ ಜನರುಪಾದಯಾತ್ರೆಯಮೂಲಕ ದೇವಸ್ಥಾನಕ್ಕೆ ಆಗಮಿಸಿದ್ದರು.

ಹಾಲುಗ್ಗಿ, ಕುಂಬಳಕಾಯಿ ಬದನೆಕಾಯಿ ಪಲ್ಲೆ ಹಾಗೂ ಕಿಚಡಿ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿತ್ತು.

85 ಕ್ಕೂ ಹೆಚ್ಚು ಕ್ವಿಂಟಲ್ ಆಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಅಂದಾಜು 75 ರಿಂದ 80 ಸಾವಿರದಷ್ಟು ಜನರಿಗೆ ಪ್ರಸಾದ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು ಎಂದು ಪ್ರಸಾದ ಸೇವೆಯ ವ್ಯವಸ್ಥಾಪಕ ಅಶೋಕ ಗೊಬ್ಬಾಣಿ ತಿಳಿಸಿದರು.

ಬೆಳಗ್ಗೆ ಏಳು ಗಂಟೆಯಿಂದ ಸಂಜೆ ಆರರವರೆಗೆ ಪ್ರಸಾದ ವ್ಯವಸ್ಥೆ ಇತ್ತು. ದ್ವಾರಕಾಧೀಶ ಭಟ್ಟಡ, ಅಶೋಕ ಗೊಬ್ಬಾಣಿ, ಸುರೇಶ ಅಸ್ಕಿ, ಗುರುಲಿಂಗಪ್ಪ ಚಿಂಚಲಿ, ಸದಾಶಿವ ಬಂಗಿ, ದುಂಡಪ್ಪ ಬಿರಾದಾರ ಪಾಟೀಲ,

ತಿಪ್ಪಣ್ಣ ಕುಳಲಿ, ಮಲ್ಲಪ್ಪ ಕಾನಟ್ಟಿ, ಬಸವರಾಜ ಕಾನಟ್ಟಿ, ಮಹೇಶ ಭಟ್ಟಡ, ಪಂಡಿತ ಭೋಸಲೆ, ಶಿವಲಿಂಗಪ್ಪ ಕಾನಟ್ಟಿ. ಶ್ರೀಶೈಲ ಪಾಟೀಲ, ವಿಠ್ಠಲ ಜಾಧವ, ಮಲ್ಲಯ್ಯ ಕಾಡದೇವರ, ಸಂಗಪ್ಪ ಉಳ್ಳಾಗಡ್ಡಿ, ಕಾಡಯ್ಯ ಕಾಡದೇವರ, ಬಸವರಾಜ ಕೊಕಟನೂರ, ಬಸಪ್ಪ ಮುತ್ತೂರ, ಚಂದ್ರಶೇಖರ ಕುರಿ, ಗುರು ಅಸ್ಕಿ, ಮಲ್ಲಪ್ಪ ಅಸ್ಕಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ವಿದ್ಯಾರ್ಥಿ ಜೀವನ ಮೌಲ್ಯಯುತವಾಗಿರಲಿ: ಶಬ್ಬಿರ ಡಾಂಗೆ



**ಮಹಾಲಿಂಗಪುರ :** ವಿದ್ಯಾರ್ಥಿ ಜೀವನ ಮೌಲ್ಯಯುತವಾಗಿರಬೇಕು. ಯಾವುದೇ ಋಣಾತ್ಮಕ ಚಿಂತನೆಗಳಿಗೆ ಕಿವಿಗೊಡದೆ ಧನಾತ್ಮಕ ಆಲೋಚನೆಗಳನ್ನು ಬೆಳೆಸಿಕೊಳ್ಳಬೇಕು ಎಂದು ಖ್ಯಾತ ಸಾಹಿತಿ ಶಬ್ಬಿರ ಡಾಂಗೆ ಹೇಳಿದರು.

ಪಟ್ಟಣದ ಕೆ.ಎಲ್.ಇ. ಸಂಸ್ಥೆಯ ಎಸ್.ಸಿ.ಪಿ. ಪದವಿ ಕಾಲೇಜಿನ ವಿದ್ಯಾರ್ಥಿ ವೃಂದ ಮತ್ತು ಸಾಂಸ್ಕೃತಿಕ ವಿಭಾಗದ ವತಿಯಿಂದ ಜರುಗಿದ 2025 ನೇ ಸಾಲಿನ ಸಾಂಸ್ಕೃತಿಕ ಸಂಭ್ರಮ 'ನಮ್ಮ ಸಂಸ್ಕೃತಿ ನಮ್ಮ ಹೆಮ್ಮೆ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ ಕಾಲೇಜು ದಿನಗಳಲ್ಲಿ ಕಳೆದ ಸಮಯವನ್ನು ನೆನಸಿಕೊಂಡು ಎಲ್ಲರೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಭಾಗವಹಿಸಬೇಕು. ಸಮಯ ತುಂಬಾ ಮಹತ್ವದ್ದು. ಎಲ್ಲರೂ ಅದರ ಸದ್ಬಳಕೆ ಮಾಡಿ ಕೊಳ್ಳಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ಕೆ. ಎಮ್. ಅವರಾದಿಮಾತನಾಡಿನಮ್ಮಕಾಲೇಜಿನವಿದ್ಯಾರ್ಥಿಗಳು ಪಠ್ಯ ಹಾಗೂ ಪಠ್ಯೇತರ ಚಟುವಟಿಕೆ ಸೇರಿದಂತೆ ಎಲ್ಲಾ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿದ್ದಾರೆ. ವಿದ್ಯಾರ್ಥಿಗಳು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಬೇಕು. ಇಂತಹ ಕಾರ್ಯಕ್ರಮಗಳು ಭವಿಷ್ಯದಲ್ಲಿ ನಾಯಕತ್ವ ಗುಣವನ್ನು ಬೆಳಸಿಕೊಳ್ಳುವಲ್ಲಿ ಸಹಾಯಕಾರಿಯಾಗುತ್ತದೆ ಎಂದರು.

ಕಾರ್ಯಕ್ರಮದ ನಿಮಿತ್ಯ ಉಪನ್ಯಾಸಕರು, ವಿದ್ಯಾರ್ಥಿಗಳು ದೇಶಿಯ ಉಡುಪುಗಳನ್ನು ಧರಿಸಿಕೊಂಡು, ಎತ್ತಿನ ಬಂಡಿ, ಕುದುರೆಯ ಮೂಲಕ ಅತಿಥಿಗಳನ್ನು ಕಾಲೇಜಿಗೆ ಸ್ವಾಗತಿಸಿದ್ದು ವಿಶೇಷವಾಗಿತ್ತು.

ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎಲ್. ಬಿ. ತುಪ್ಪದ, ಸ್ಥಳೀಯ ಆಡಳಿತ ಮಂಡಳಿ ಸದಸ್ಯರಾದ ಅಶೋಕ ಅಂಗಡಿ, ಸಂತೋಶ ಹುದ್ದಾರ, ಐ.ಕ್ಯೂ.ಎಸ್.ಸಿ. ಸಂಯೋಜಕಿ ಶ್ರೀಮತಿ ಸುನಂದಾ ಸೋರಗಾಂವಿ, ಸಾಂಸ್ಕೃತಿಕ ವಿಭಾಗ ಸಂಯೋಜಕರಾದ ಟಿ. ಡಿ. ಡಂಗಿ, ಸಿ. ಎಮ್. ಐಗಳಿ, ಕಾನಿಪ ಅಧ್ಯಕ್ಷ ಮಹೇಶ ಮನ್ನಯನ್ನವರಮಠ ಹಾಗೂ ಮಹಾವಿದ್ಯಾಲಯದ ವಿವಿಧ ವಿಭಾಗದ ಮುಖ್ಯಸ್ಥರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಸಂಭ್ರಮ ಸಡಗರದ ಜ್ಯೋತಿಬಾ ದೇವರ ಗುಲಾಲ ಜಾತ್ರೆ

## ಉತ್ತರ ಕರ್ನಾಟಕದ ಗುಲಾಲ ಜಾತ್ರೆ। ಹತ್ತಾರು ಕ್ವಿಂಟಲ್ ಗುಲಾಲ ಮಾರಾಟ। ಗುಲಾಲದಲ್ಲಿ ಮಿಂದೆದ್ದ ಗ್ರಾಮದ ಜನತೆ। ಪಲ್ಲಕ್ಕಿಗೆ ಗುಲಾಲು ಹಾರಿಸಿದ ಭಕ್ತರು




**ಬನಹಟ್ಟಿ :** ಉತ್ತರ ಕರ್ನಾಟಕದ ಗುಲಾಲ ಜಾತ್ರೆ ಎಂದೇ ಪ್ರಸಿದ್ಧಿ ಪಡೆದ ಸಮೀಪದ ಆಸಂಗಿ ಗ್ರಾಮದ ಜ್ಯೋತಿಬಾ ದೇವರ ಜಾತ್ರೆ ಶುಕ್ರವಾರ ಸಂಜೆ ಸಂಭ್ರಮ ಸಡಗರದಿಂದ ಜರುಗಿತು.

ಜಾತ್ರೆಯ ನಿಮಿತ್ಯವಾಗಿ ಬೆಳಿಗ್ಗೆ ದೇವಸ್ಥಾನದಲ್ಲಿಅಭಿಷೇಕ,ವಿಶೇಷ ಪೂಜೆಯನ್ನು ಕೈಗೊಳ್ಳಲಾಗಿತ್ತು. ಮಧ್ಯಾಹ್ನ ಸಾವಿರಾರು ಜನರಿಗೆ ಅನ್ನ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿತ್ತು.

ಸಂಜೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಜ್ಯೋತಿಬಾ ದೇವರ ಪಲ್ಲಕ್ಕಿ ಉತ್ಸವ ನಡೆಯಿತು. ಈ ಸಂದರ್ಭದಲ್ಲಿ ನೂರಾರು ಮಹಿಳೆಯರು ಆರತಿ ಮತ್ತು ಕುಂಭವನ್ನು ಹೊತ್ತು, ಪುರುಷರು ದಿವಟಿಗೆಗಳನ್ನು ಹಿಡಿದುಕೊಂಡು ವ್ ಂ ರ್ ವ್ ಣಿ ಗ್ ಂ ು ್ ಂ ಲ್ಲಿ ಭಾಗವಹಿಸಿದ್ದರು. ನಂದಿಕೋಲು ನೃತ್ಯ ಎಲ್ಲರ ಗಮನ ಸೆಳೆಯಿತು. ಪಲ್ಲಕ್ಕಿ ಉತ್ಸವದ ಸಂದರ್ಭದಲ್ಲಿ ಪುರುಷರು, ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಪ್ರತಿಯೊಬ್ಬರೂ ಪಲ್ಲಕ್ಕಿಗೆ ಗುಲಾಲನ್ನು ಎರಚಿದರು. ಯುವಕರು ಗುಲಾಲು ಎರಚಿ ಸಂಭ್ರಮಿಸಿದರು.

ಕೊಲ್ಲಾಪುರ, ಸಾಂಗಲಿಯಿಂದ ಗುಲಾಲ ಖರೀದಿ: ಜಾತ್ರೆಯ ಅಂಗವಾಗಿ ಇಲ್ಲಿ ಹತ್ತಾರು ಕ್ವಿಂಟಲ್ ನಷ್ಟು ಗುಲಾಲ ಮಾರಾಟವಾಗುತ್ತದೆ. ಸ್ಥಳೀಯರು ಜಾತ್ರೆಗೆ ಬೇಕಾಗುವ ಗುಲಾಲನ್ನು ನೆರೆಯ ಮಹಾರಾಷ್ಟ್ರದ ಕೊಲ್ಲಾಪುರ ಮತ್ತು ಸಾಂಗಲಿಯಿಂದ ಖರೀದಿ ಮಾಡಿಕೊಂಡು ಬರುತ್ತಾರೆ.

ಗ್ರಾಮದ ಪ್ರಮುಖರಾದ ನ್ಯಾಯವಾದಿ ಹರ್ಷವರ್ಧನ ಪಟವರ್ಧನ, ಪಾಂಡುರಂಗ ಸಾಲ್ಗುಡೆ, ದೊಂಡಿಬಾ ಗಾಯಕವಾಡ, ದುಂಡಪ್ಪ ಸಾಲ್ಗುಡೆ, ರಾಜು ಪಾಟೀಲ, ಬಸವರಾಜ ಗಾಯಕವಾಡ, ರಾಘವೇಂದ್ರ ಕೋಲಾರ, ಕೇದಾರಿ ಗಾಯಕವಾಡ, ದಶರಥ ಹೊಡಗೆ, ಕುಮಾರ ಸಾಲ್ಗುಡೆ, ಬಾಳಪ್ಪ ಕದಮ, ಜ್ಯೋತಿಬಾ ಸಾಲ್ಗುಡೆ, ನಾಗಪ್ಪ ಜಾಧವ, ಪ್ರಕಾಶ ಶಿರಗೂರ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

# ಬೇಸಿಗೆ ನೀಗಿಸುವಲ್ಲಿ ಹಿಪ್ಪರಗಿ ಬ್ಯಾರೇಜನಲ್ಲಿ ಸಾಕಷ್ಟು ನೀರು



**ರಬಕವಿ–ಬನಹಟ್ಟಿ :** ಇದೀಗ ಏಪ್ರಿಲ್ ಕೊನೆಯ ದಿನದಲ್ಲಿ ಬಿಸಿಲಿನ ತಾಪಮಾನ 42 ಡಿಗ್ರಿಗಿಂತಲೂ ಏರಿಕೆಯಾಗಿದ್ದು, ನದಿಯಲ್ಲಿ ನೀರು ಸಂಗ್ರಹ ಸಾಮರ್ಥ್ಯ ಉತ್ತಮವಾಗಿದೆ. ರಬಕವಿ, ಬನಹಟ್ಟಿ, ತೇರದಾಳ, ಅಥಣಿ ಸೇರಿದಂತೆ ಹಲವಾರು ಪಟ್ಟಣ ಹಾಗು ಗ್ರಾಮಗಳಲ್ಲಿನ ಜನತೆ ನದಿ ನೀರನ್ನು ಮಿತವಾಗಿ ಬಳಸಿದರೆ, ಈ ಬಾರಿಯ ಬೇಸಿಗೆಯಲ್ಲಿ ನೀರಿನ ಕೊರತೆಯಾಗದೆ ಸರಾಗವಾಗಲಿದೆ.

524.87 ಎತ್ತರದ ಹಿಪ್ಪರಗಿಯಲ್ಲಿನ ಬ್ಯಾರೇಜ್ನಲ್ಲಿ ಸದ್ಯ 521.88 ರಷ್ಟು ನೀರಿನ ಸಾಮರ್ಥ್ಯವಿದೆ. 2.59 ಟಿಎಂಸಿಯಷ್ಟು ನೀರು ಬಳಕೆಗೆ ಅರ್ಹವಿದ್ದು, ಒಟ್ಟು 3.39 ಟಿಎಂಸಿಯಷ್ಟು ನೀರು ಸಂಗ್ರಹವಿದೆ. ಇದರಿಂದ ಸಂಪೂರ್ಣ ಬೇಸಿಗೆ ದಿನಗಳನ್ನು ನಿಭಾಯಿಸುವಲ್ಲಿ ಯಶಸ್ಸುಕಾಣುವಲೆಕ್ಕಾಚಾರಅಧಿಕಾರಿಗಳದ್ದು. ನೀರಿನ ಸಮಸ್ಯೆಗೆ ಹಿಪ್ಪರಗಿ ಬ್ಯಾರೇಜ್ ಸಹಕಾರಿಯಾಗಿದ್ದು, ಜೂನ್ ಮಧ್ಯಂತರ ಅವಧಿಗೆ ಯಾವುದೇ ರೀತಿ ನೀರಿನ ಕೊರತೆಯಾಗದು.

ನೀರಿನಮಟ್ಟ ಹೆಚ್ಚಳ: ಮಾರ್ಚ್ ಕೊನೆಯ ದಿನಗಳಲ್ಲಿ ನೀರಿನ ಮಟ್ಟ 2.49 ರಷ್ಟು ದಾಖಲಾಗಿತ್ತು. ಪ್ರಸಕ್ತ 0.10 ಟಿಎಂಸಿಯಷ್ಟು ನೀರು ಏರಿಕೆಯಾಗಿದೆ. ರಾಜಾಪೂರ ಬ್ಯಾರೇಜ್ನಿಂದ ಹೆಚ್ಚುವರಿ ನೀರನ್ನು ರಾಜ್ಯಕ್ಕೆ ಹರಿಬಿಟ್ಟ ಕಾರಣ ಕೊಂಚ ನೀರಿನಮಟ್ಟ ಏರಿಕೆಗೆ ಕಾರಣವಾಗಿದೆ.

**ಟಾಸ್ಕ್ ಫೋರ್ಸ್:**

ತಾಲೂಕಿನ ನಗರ ಹಾಗು ಎಲ್ಲ ಗ್ರಾಮಗಳಿಗೆ ಸಂಬಂಧಿಸಿದಂತೆ ಕುಡಿಯುವ ನೀರಿನ ಯೋಜನೆ ಸಲುವಾಗಿ ಟಾಸ್ಕ್ ಫೋರ್ಸ್ ನೇಮಿಸಲಾಗಿದೆ. ಸದ್ಯ ಎಲ್ಲಿಯೂ ನೀರಿನ ಸಮಸ್ಯೆಯಿಲ್ಲದ ಕಾರಣ ಕೇವಲ ಮಾಹಿತಿಗಳತ್ತ ಗಮನ ಹರಿಸಲಾಗುತ್ತಿದ್ದು, ಕಳೆದ ವರ್ಷಕ್ಕಿಂತ ಈ ಬಾರಿ ನೀರಿನ ಮೂಲ ಜನತೆಗೆ ಸಹಕಾರಿಯಾಗಲಿದೆ ಎಂಬುದು ಅಧಿಕಾರಿಗಳ ವಿಶ್ವಾಸ.

# ಜನಿವಾರ ತಗೆಸಿ ಅಪಮಾನ ಮಾಡಿದ ತಪ್ಪಿತಸ್ಥರಿಗೆ ವಜಾಗೊಳಿಸಿ ಶಿಕ್ಷೆ ನೀಡಲು ಆಗ್ರಹ



**ಮುದ್ದೇಬಿಹಾಳ :** ಜನಿವಾರ ತೆಗೆಯುವ ಮೂಲಕ ಜನಿವಾರ ಸಮಾಜದ ಸ್ವಾಸ್ಥ್ಯ ಹಾಳು ಮಾಡಿದ್ದು ಅದಕ್ಕೆ ಕಾರಣಿಕರ್ತರನ್ನು ತಕ್ಷಣ ವಜಾಗೊಳಿಸಬೇಕು ಮತ್ತು ಅವರಿಗೆ ಬಂಧನ ಮಾಡಬೇಕು. ಎಂದು ಹಿಂದೂಪರ ಸಂಘಟನೆ ಮುಖಂಡ ಉದಯಸಿಂಗ ರಾಯಚೂರು ಹೇಳಿದರು.ಅವರು ಪಟ್ಟಣದ ರಾಘವೇಂದ್ರ ಮಂದಿರದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದರು.ಇತ್ತಿಚೆಗೆ ಶಿವಮೊಗ್ಗ, ಸೇರಿದಂತೆ ಹಲವು ಕಡೆ ಪರೀಕ್ಷೆ ಬರೆಯುವಾಗ ಜನಿವಾರ ಹಾಕಿದ ಪರೀಕ್ಷಾರ್ಥಿಗಳ ಜನಿವಾರ ತಗೆಸಿದ ಹಿನ್ನೆಲೆ ರಾಜ್ಯಾದ್ಯಂತ ಜನಿವಾರ ಧರಿಸಿದ ಸಮಾಜ ಬಾಂಧವರು ಆಕ್ರೋಶ ವ್ಯಕ್ತಪಡಿಸಿದ್ದು. ಕಾರಣ ಶೀಘ್ರವಾಗಿ ತಪ್ಪಿತಸ್ಥರಿಗೆ ವಜಾ ಮತ್ತು ಶಿಕ್ಷೆ ನೀಡಬೇಕು. ಒಂದು ವೇಳೆ ವಿಳಂಬ ಮಾಡಿದರೆ, ರಾಜ್ಯ ಸರ್ಕಾರದ ಗ್ರಹ ಸಚಿವರು,ಶಿಕ್ಷಣ ಸಚಿವರು ನೇರ ಹೊಣೆಯಾಗುತ್ತಾರೆ.ಎಂದು ಹೇಳಿದರು.

ಹಾಗೆ ಈಡಿ ಜನಿವಾರ ಸಮಾಜ ಬಾಂಧವರು ಸೇರಿ ಸರ್ಕಾರದ ವಿರುದ್ಧ ಬೀದಿಗೆ ಇಳಿದು ಹೋರಾಟ ಮಾಡಬೇಕಾಗುತ್ತದೆ.ಎಂದರು.

ವಿವಿಧ ಜನಿವಾರ ಸಮಾಜ ಬಾಂಧವರಾದ, ಪಿ.ಬಿ.ಕುಲಕರ್ಣಿ,ವಾಸುದೇವ ಶಾಸ್ತ್ರಿ,ಸಹನಾ ಬಡಿಗೇರ,ಸೇರಿದಂತೆ ಅನೇಕರು ಮಾತನಾಡಿ ಸಿಇಟಿ ಪರೀಕ್ಷೆ ಬರೆಯುವಾಗ ಜನಿವಾರ ತಗೆಸಿ ಅಪಮಾನ ಮಾಡಿದ್ದು ಖಂಡನಿಯ ಕಾರಣ ಈ ಕೃತ್ಯ ಮಾಡಿದವರಿಗೆ ಕರ್ತವ್ಯ ದಿಂದ ವಜಾಗೊಳಿಸಿ ಕಠಿಣ ಶಿಕ್ಷೆ ನೀಡಬೇಕು. ಇಲ್ಲವಾದಲ್ಲಿ ಹೋರಾಟ ಮಾಡಬೇಕಾಗುತ್ತದೆ.ಎಂದರು.ಹಾಗೆ ಶನಿವಾರ ಜನಿವಾರ ಧರಿಸಿದ ಸಮಾಜ ಬಾಂಧವರು ಸೇರಿ ತಹಶಿಲ್ದಾರ ಮೂಲಕ ಸರ್ಕಾರಕ್ಕೆ ಸಚಿವರಿಗೆ ಮನವಿ ಸಲ್ಲಿಸುತ್ತೇವೆ.ಎಂದರು.

ಈ ವೇಳೆ ಅನೇಕ ಸಮಾಜ ಬಾಂಧವರು ಉಪಸ್ಥಿತರಿದ್ದರು.




ಮುದ್ದೇಬಿಹಾಳ:ಮೇ ತಿಂಗಳಲ್ಲಿ ವಿಜಯಪುರದಲ್ಲಿ ನಡೆಯಲಿರುವ ರಾಜ್ಯ ಮಟ್ಟದ ಬೃಹತ್ ರೈತ ಜಾಗೃತಿ ಸಮಾವೇಶದ ಪ್ರಚಾರ ಸಾಮಗ್ರಿಗಳನ್ನು ಸಹಾಯಕ ಕೃಷಿ ನಿರ್ದೇಶಕರ, ತೋಟಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಗಳ ಆವರಣದಲ್ಲಿ ಪ್ರತ್ಯೇಕವಾಗಿ ಬಿಡುಗಡೆಗೊಳಿಸಲಾಯಿತು. ರೈತ ಸಂಘದ ತಾಲೂಕಾಧ್ಯಕ್ಷ ಮಹಾಂತಗೌಡ ಬಿರಾದಾರ ವಕೀಲರು, ರಾಜು ವಾಲಿಕಾರ, ಅಪ್ಪುಗೌಡ ಪಾಟೀಲ, ರಾಜು ತುಂಬಗಿ,ರೈತ ಮುಖಂಡರು, ಅಧಿಕಾರಿಗಳು ಸೇರಿದಂತೆ ಉಪಸ್ಥಿತರಿದ್ದರು.

# ಯತ್ನಾಳರೇ ಮುಸ್ಲಿಂರ ತಂಟೆಗೆ ಬಂದರೆ ಹುಷಾರ್: ಅವಟಿ ಎಚ್ಚರಿಕೆ

**ಮುದ್ದೇಬಿಹಾಳ :** ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳವರೇ ತಾವು ಒಬ್ಬ ಸ್ವಾಭಿಮಾನಿ ಹಾಗೂ ನಿಷ್ಠಾವಂತ ಬಿಜೆಪಿ ನಾಯಕನಾಗಿದ್ದರೆ ನಿಮ್ಮನ್ನು ಹೈಕಮಾಂಡ್ ಏಕೆ ಉಚ್ಚಾಸಿದೆ ಎನ್ನುವುದನ್ನು ರಾಜ್ಯದ ಜನ ಸೂಕ್ಷ್ಮ ವಾಗಿ ಗಮನಿಸಿದ್ದಾರೆ, ತಾವು ಮುಸ್ಲಿಂರ ಹೆಸರನ್ನು ಬಳಸಲು ಯೋಗ್ಯರೇ ಅಲ್ಲ, ಈಗಾಗಿ ತಾವು ಮುಂದಿನ ದಿನಗಳಲ್ಲಿ ಮತ್ತೇ ಮುಸ್ಲಿಂರನ್ನು ಕೆಣಕಿದರೆ ಗ್ರಾಮೀಣ ಮಟ್ಟದ ಮುಸ್ಲಿಂರುತಾಕತ್ತುತೋರಿಸುತ್ತಾರೆ ಎಂದು ಸ್ಥಳಿಯ ಅಂಜುಮನ್ ಸಮೀತಿಯ ಅಧ್ಯಕ್ಷ ಎಲ್.ಎಚ್. ಅವಟಿ ಅವರು ಹೇಳಿದರು.

ಇತ್ತೀಚಿಗೆ ಮಹ್ಮದ ಪೈಗಂಬರ್ ಅವರಿಗೆಅವಮಾನದಶಬ್ದಗಳನ್ನು ಬಳಸಿದ ಪರಿಣಾಮ, ತಾಲ್ಲೂಕಿನನಾಲತವಾಡಪಟ್ಟಣದ ಅಂಜುಮನ್ ಸಭಾ ಭವನದಲ್ಲಿ




ಕರೆಯಲಾದ ಸದಸ್ಯರ ಸಭೆಯಲ್ಲಿ ಅವರು ಮಾತನಾಡಿದರು.

ಮೌಲಾಸಾಬ ರಕ್ಕಸಗಿ ಜೊತೆ ಜಂಟಿಯಾಗಿ ಮಾತನಾಡಿದ ಅವರು ಸದ್ಯ ತಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ಹಳ್ಳನೂ ಕಾಣಲಿಲ್ಲ, ಮನೀನೂ ಕಾಣಲಿಲ್ಲ ಎನ್ನುವಂತಾಗಿದೆ, ಎಲ್ಲಾ ಧರ್ಮಕ್ಕೂ ಒಬ್ಬೊಬ್ಬರು ಧರ್ಮ ಗುರು ಇದ್ದಾರೆ, ಬಸವಣ್ಣ ಹಾಗೂ ಪೈಗಂಬರರ ಸಾರ ಒಂದೇ ಎನ್ನುವುದನ್ನು ಯತ್ನಾಳ ಕಲಿಯಬೇಕಿದೆ, ತಾವು ಎಲ್ಲಾ ಜಾತಿಯರಿಗೂ ನಿಂದನೆ ಮಾಡಿ ಇಂದುರಾಜಕೀಯದಿಂದಮೂಲೆ ಗುಂಪಾಗಿದ್ದೀರಿ, ಒಂದು ವೇಳೆ ನೀವು ಉತ್ತಮ ನಾಯಕನಾಗಿದ್ದರೆ ಜನನಿಮ್ಮನ್ನುಮಂತ್ರಿನೋಅಥವಾ ಸಿಎಂ ಮಾಡಲು ಹೋರಾಟ ಮಾಡುತ್ತಿದ್ದರು, ನಿಮ್ಮ ಪಕ್ಷದವರೇ ನಿಮ್ಮನ್ನು ತಿರಸ್ಕರಿಸಿದ್ದಾರೆ ಸ್ವಲ್ಪು ಸುಧಾರಿಸಿಕೊಳ್ಳಿ ಎಂದರು.

ನಾವು ನಮ್ಮ ಹಿರಿಯರು ಹಾಗೂ ಎಲ್ಲಾ ಸಮಾಜದವರು ರಾಜ್ಯದಲ್ಲಿ ಸೌಹಾರ್ದತೆಗೆ ಒತ್ತು ಕೊಡುತ್ತೇವೆ, ತಮ್ಮ ಹುಚ್ಚು ನಡತೆ ಮುಂದುವರೆದರೆ ಇಡೀ ರಾಜ್ಯದ ಜನ ಪಾಠ ಕಲಿಸುತ್ತಾರೆ, ಬುರ್ಕಾ, ಇಸ್ಲಾಂ, ಮುಸಲರೂ ಅಂತ ಏನೇನೋ ಪದ ಬಳಸುತ್ತೀರಿ ಆದರೆ ನಿಮಗೆ ಹಾಗೂ ಮೋದಿಜೀಯವರಿಗೆ ಮುಸ್ಲಿಂರು ಒಂದು ಥರಾ ಬೂಸ್ಟ್ ಎನ್ನುವುದು ಮರೆಯಬೇಡಿ, ಉತ್ತಮ ರಾಜಕೀಯ ಮಾಡಿ ಬೆಳೆಯುವ ಕೆಲಸ ಮಾಡಬೇಕಿತ್ತು ಮಹಿಳೆಯರಿಗೆ ಮರ್ಯಾದೆ ಕೊಡದ ನೀವು ನಾಲಾಯಕ್ ನಾಯಕ, ಮುಂದಿನ ದಿನಗಳಲ್ಲಿ ಎಚ್ಚರಿಕೆಯಿಂದ ಇರಬೇಕು ಇಲ್ಲವಾದರೆ ಮಹಿಳೆಯರೇ ನಿಮಗೆ ಪಾಠ ಕಲಿಸಿ ಬದುಕುವ ಹಾದಿ ತೋರಿಸುತ್ತಾರೆ ಎಂದು ಈ ಮೂಲಕ ಸಂದೇಶ ಕೊಡುತ್ತೇವೆ ಎಂದರು. ಈ ವೇಳೆ ಸದಸ್ಯರಾದ ಉಮರಫಾರೂಕ ಮೂಲಿಮನಿ, ಮಹ್ಮದ್ಇಸ್ಮಾಯಿಲ್ ಮುಲ್ಲಾ, ರಸೂಲಸಾಬ್ ಖಾಜಿ,ಅಲ್ಲಾಬಕ್ಸ್ ಕುಳಗೇರಿ, ಅಲ್ಲಾಬಕ್ಸ್ ಮೂಲಿಮನಿ, ಜಾಕೀರ್ ಮೂಲಿಮನಿ, ಯಾಕೂಬ್ ಅಲಿ ಮುದ್ದೇಬಿಹಾಳ ಇದ್ದರು.

# ಮುದುಗಲನಲ್ಲಿ150 ಮಕ್ಕಳಿಗೆ ಸಾಮೂಹಿಕ ಖತ್ನಾ(ಮುಂಜಿ) ಕಾರ್ಯಕ್ರಮ

## ಬಾಲಕರಿರುವಾಗಲೇ ಖತ್ನಾ ಮಾಡುವದು ವೈಜ್ಞಾನಿಕ: ಡಾ| ಜಿಲಾನಿ ಆವಟಿ

**ಮುದಗಲ್ಲ :** ಪಟ್ಟಣದ ಕಿಲ್ಲಾದಲ್ಲಿ ಇಸ್ಲಾಂ ಧರ್ಮದ ಮುಸ್ಲಿಂ ಭಾಂದವರು ಸಂಪ್ರದಾಯದಂತೆ ಮಕ್ಕಳಿಗೆ (ಮುಂಜಿವಿ )ಖತ್ನಾ ಕಾರ್ಯಕ್ರಮ ಜರುಗಿಸಿದರು . ಮುಸ್ಲಿಂ ಸಮುದಾಯದವರಲ್ಲಿ ಖತ್ನಾ ಎನ್ನುವದು ಅತ್ಯಂತ ಮುಖ್ಯವಾದ ಅಂಶವಾಗಿದೆ.. ಬಾಲಕರಿರುವಾಗಲೇ ಇಳಿ ವಯಸ್ಸಿನಲ್ಲಿ ಖತ್ನಾ ಮಾಡಿಸುವದು ವೈಜ್ಞಾನಿಕವಾಗಿದೆ ಎಂದು ವಿಜಯಪುರದ ಅಲ್ ಅಮೀನ್ ವೈದ್ಯಕೀಯಮಹಾವಿದ್ಯಾಲಯದ ಶಸ್ತ್ರ ಚಿಕಿತ್ಸಕ ಡಾ| ಜಿಲಾನಿ ಆವಟಿ ಹೇಳಿದರು.

ಪಟ್ಟಣದ ಕಿಲ್ಲಾದಲ್ಲಿ ಕಲ್ಯಾಣ ಕರ್ನಾಟಕ ದರ್ವೇಶು ಅಲೆಮಾರಿ ಹಾಗೂಅರೆಅಲೆಮಾರಿಜನಾಂಗದ ಕ್ಷೇಮಾಭಿವೃದ್ಧಿ ಸಂಘ ಹಾಗೂ ವಿಜಯಪುರ ಅಲ್ ಅಮೀನ್ ವೈದ್ಯಕೀಯ ಮಹಾವಿದ್ಯಾಲಯ



ಮತ್ತು ಆರ್.ಕೆ. ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ ಸಾಮೂಹಿಕ ಖತ್ನಾ (ಮುಂಜಿವೆ) ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಮುಸ್ಲಿಂ ಸಮಾಜದಲ್ಲಿ ಖತ್ನಾ ಮಾಡುವುದು ಮುಖ್ಯ ಘಟ್ಟವಾಗಿದೆ. ಇದು ವೈಜ್ಞಾನಿಕವಾಗಿರುವಂತಹದು. ಸಣ್ಣ ಮಕ್ಕಳಿರುವಾಗಲೇ ಖತ್ನಾ ಮಾಡಿಸುವದರಿಂದ ಮಕ್ಕಳ ಬೆಳವಣಿಗೆಗೆ ಮತ್ತು ಚುರುಕು ಬುದ್ಧಿಗೆ ನೆರವಾಗಲಿದೆ ಎಂದು ಹೇಳಿದರು. ಈ ಎರಡು ತಿಂಗಳಲ್ಲಿ ನಮ್ಮ ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ ಎಲ್ಲ ರೀತಿಯ ಶಸ್ತ್ರ ಚಿಕಿತ್ಸೆಗಳಿಗೆ ಭಾಗಶ: ರಿಯಾಯಿತಿ ಮತ್ತು ಉಚಿತವಾಗಿ ನೆರವೇರಿಸಲು ಸಂಸ್ಥೆಯ ಮುಖ್ಯಸ್ಥರು ತೀರ್ಮಾನಿಸಿದ್ದಾರೆ. ಇದರ ಸದುಪಯೋಗವನ್ನು ಇಸ್ಲಾಂ ಸಮಾಜ ಬಾಂಧವರು ಸದುಪಯೋಗಪಡಿಸಿಕೊಂಡು ಬಡವರಿಗೆ ನೆರವಾಗಬೇಕೆಂದು ಮನವಿ ಮಾಡಿದರು. ಶಸ್ತ್ರ ಚಿಕಿತ್ಸಕರಿಂದಲೇ ಖತ್ನಾ ಮಾಡಿಸುವದು ಉತ್ತಮ ಎಂಬ ಕಿವಿ ಮಾತು ಹೇಳಿದರು.

ಡಾ| ಫಜಲ್ ಖಾದ್ರಿ ಎಂ.ಎಸ್. ಮಾತನಾಡಿದರು. ವೇದಿಕೆ ಮೇಲೆ ಪುರಸಭೆ ಉಪಾಧ್ಯಕ್ಷ ಅಜಮೀರ ಬೆಳ್ಳಿಕಟ್, ಧರ್ಮ ಗುರು ಜಮೀರ ಅಹ್ಮದ ಖಾಜಿ, ಪುರಸಭೆ ಸದಸ್ಯರಾದ ಅಮೀರಬೇಗ್ ಉಸ್ತಾದ, ಎಸ್.ಆರ್. ರಸೂಲ, ಮಹಿಬೂಬ ಕಡ್ಡಿಪುಡಿ, ದಾವೂದ್‌ಸಾಬ, ಪತ್ರಕರ್ತ ರಾಘವೇಂದ್ರ ಗುಮಾಸ್ತಿ,ಅನ್ವರ ಕಂದಗಲ್ಲ, ಕಲ್ಯಾಣ ಕರ್ನಾಟಕ ದರ್ವೇಶ ಸಂಘದ ಜಿಲ್ಲಾಧ್ಯಕ್ಷ ರಹಿಂಶಾ ಮಕಾನ್‌ದಾರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೋಹಿಯುದ್ದೀನ್ ಭಂಡಾರಿ, ಡಾ| ಹಾಜಿ ಮಸ್ತಾನ್, ಡಾ| ನವೀತ್ ಕಂದಗಲ್ಲ, ಮೀರುಷಾ, ಪೀರಾಷಾ,ಶೇರಲಿ,ಶಾಮೀದಶಾ, ಸೇರಿದಂತೆ ಮುಂತಾದವರಿದ್ದರು. ಉಚಿತ ಖತ್ನಾ ಶಿಬಿರದಲ್ಲಿ 150 ಮಕ್ಕಳಿಗೆ ನೆರವೇರಿಸಲಾಯಿತು. .ಈ ಸಂಧರ್ಭದಲ್ಲಿ ಊರಿನ ಗುರುಹಿರಿಯರು. ಸಮಾಜದ ಮುಖಂಡರು ಹಾಗೂ ದರವೇಶ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರು ಪದಾಧಿಕಾರಿಗಳು. ಸಮಾಜ ಬಾಂಧವರು ಹಮ್ಮಿಕೊಂಡು ಏರ್ಪಡಿಸಿದರು.

ವರದಿ : ಯಮನೂರಸಾಬ. ನಧಾಫ್

# ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ

**ಬೆಳಗಾವಿ :** ನಿಪ್ಪಾಣಿ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ ಖಾಲಿ ಇರುವ 10 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 59 ಸಹಾಯಕಿಯರ ಹುದ್ದೆಗೆ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸ್ಥಳೀಯ ಮಹಿಳಾ ಅಭ್ಯರ್ಥಿಗಳು ಅರ್ಜಿಗಳನ್ನು ವೆಬ್‌ಸೈಟ್ https://karnemakaone.kar.nic.in/abcd/ ಮೂಲಕ ಮೇ. 16, 2025ರ ಒಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ನಿಪ್ಪಾಣಿ ಇವರ ಕಛೇರಿಯ ದೂರವಾಣಿ ಸಂಖ್ಯೆ: 08338-222523 ಕ್ಕೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

# 6ನೇತರಗತಿಪ್ರವೇಶಕ್ಕಾಗಿ ಅರ್ಜಿ ಆಹ್ವಾನ

**ಬೆಳಗಾವಿ :** ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೌಲಾನಾ ಆಜಾದ್ ಮಾದರಿ ಶಾಲೆಯಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಅರ್ಹ ವಿದ್ಯಾರ್ಥಿಗಳಿಂದ ಆನಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸ ಲಾಗಿದೆ. ಪ್ರವೇಶ ಪಡೆಯಲು ಇಚ್ಛಿಸುವ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಅರ್ಹ ವಿದ್ಯಾರ್ಥಿಗಳು ಸೇವಾ ಸಿಂಧು ಪೋರ್ಟಲ್ http://sevasindhuservices.karnataka.gov.in ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಮೇ 10 ಕೊನೆಯ ದಿನಾಂಕವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ಜಾಲ ತಾಣ http://dom.karnataka. in ನಲ್ಲಿ ಪಡೆಯಬಹುದಾಗಿದೆ. ಅಥವಾ ಹತ್ತಿರದ ಮೌಲಾನಾ ಆಜಾದ ಮಾದರಿ ಶಾಲೆಗಳು, ಹಾಗೂ ಅಲ್ಪಸಂಖ್ಯಾತರ ಜಿಲ್ಲಾ/ತಾಲ್ಲೂಕು ಮಾಹಿತಿ ಕೇಂದ್ರಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಮಕ್ಕಳಿಗೆ ಸಂಸ್ಕಾರ ನೀಡುವುದು ಮುಖ್ಯ: ಡಾ. ಮಹಾಂತಪ್ರಭು ಶ್ರೀಗಳು

**ಜಮಖಂಡಿ :** ಆಹಾರಧಾನ್ಯ, ಕಾರು, ಕಂಪ್ಯೂಟರ್ ಇತ್ಯಾದಿ ವಸ್ತುಗಳ ಕೊರತೆ ಉಂಟಾದಲ್ಲಿ ವಿದೇಶಗಳಿಂದ ಆಮದು ಮಾಡಿಕೊಳ್ಳಬಹುದು. ಆದರೆ, ಸಂಸ್ಕಾರವಂತ ಮಕ್ಕಳ ಕೊರತೆಯಾದರೆ ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗದು. ಆದ್ದರಿಂದ ಮಕ್ಕಳಿಗೆ ಸಂಸ್ಕಾರ ನೀಡುವುದು ಬಹಳ ಮುಖ್ಯ ಎಂದು ಶೇಗುಣಶಿಯ ವಿರಕ್ತ ಮಠದ ಡಾ.ಮಹಾಂತಪ್ರಭು ಮಹಾಸ್ವಾಮಿಗಳು ಹೇಳಿದರು.

ಜಮಖಂಡಿ ನಗರದ ಐತಿಹಾಸಿಕ ಓಲೇಮಠದ ಆಶ್ರಯದಲ್ಲಿ ಬಸವ ಜಯಂತಿ ನಿಮಿತ್ತ ಏ.15 ರಿಂದ ಏ.29 ರವರೆಗೆ ಹಮ್ಮಿಕೊಂಡಿರುವ ಶರಣರ ವಚನ ಪ್ರವಚನ, ಸದ್ಭಾವನ ಪಾದಯಾತ್ರೆ ಅಂಗವಾಗಿ ಮೂರನೆಯ ದಿನವಾದ ಗುರುವಾರ ಸಂಜೆ ನಡೆದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಜೀವನ ಬಹಳ ನಶ್ವರವಿದೆ ಎಂಬ ಅರಿವು ಇರಬೇಕು. ಹಾಗಾಗಿ ಇನ್ನುಳಿದವರ ಕಣ್ಣೀರು ಒರೆಸುವ ಕೆಲಸ ಮಾಡಬೇಕು. ಯಾವ ವಿದ್ಯೆ ಕಲಿತರೂ ಸಾವು ತಪ್ಪಿದ್ದಲ್ಲ. ಹೋಗುವಾಗ ಏನನ್ನೂ ಒಯ್ಯುವುದಿಲ್ಲ. ಆದ್ದರಿಂದ ತನ್ನ ಹೊಟ್ಟೆ ಹಸಿದಿದ್ದರೂ ಇನ್ನೊಬ್ಬರ ಹೊಟ್ಟೆ ತಣ್ಣಗಿರಲಿ ಎಂದು ಬಯಸಬೇಕು ಎಂದು ಹೇಳಿದರು.

ಝುಂಜರವಾಡದ ಬಸವರಾಜೇಂದ್ರ ಶರಣರು ಪ್ರವಚನ ನೀಡುತ್ತ ಮಾತನಾಡಿ, ಭಕ್ತಿ ನಮ್ಮನ್ನು ಸಂಸ್ಕಾರಯುತರನ್ನಾಗಿ ಮಾಡುತ್ತದೆ. ಭಕ್ತಿಗೆ ತನ್ನದೆಯಾದ ಗುಣಲಕ್ಷಣಗಳಿವೆ.




ಭಕ್ತಿಯಿಂದಲೇ ಶಕ್ತಿ. ಭಕ್ತಿಯಿಂದಲೇ ಮುಕ್ತಿ ಮತ್ತು ಮೋಕ್ಷ. ಆದ್ದರಿಂದ ಸದ್ಭಕ್ತರು ಭಕ್ತಿ ಮಾರ್ಗದಲ್ಲಿ ಸಾಗಬೇಕು ಎಂದರು.

ರೈತ ಮುಖಂಡ ಬಿ.ಎಸ್. ಸಿಂಧೂರ ಮುಖ್ಯ ಅತಿಥಿಯಾಗಿ ಮಾತನಾಡಿ, ಮನಸ್ಸಿನ ಕಲ್ಮಶ ಕಳೆಯಲು ಮತ್ತು ವ್ಯಸನಗಳಿಗೆ ದಾಸರಾಗುತ್ತಿರುವಯುವಕರನ್ನುಸನ್ಮಾರ್ಗದತ್ತ ಕೊಂಡ್ಯೊಯಲು ವಚನ ಮಹೋತ್ಸವ ಸಹಾಯಕವಾಗಿದೆ ಎಂದರು.

ನಗರಸಭೆ ಸದಸ್ಯ ಸಿದ್ದು ಮೀಶಿ ಮಾತನಾಡಿ, ಜಮಖಂಡಿ ನಗರದಲ್ಲಿ ಅಶ್ವಾರೂಢ ಬಸವೇಶ್ವರ ಪುತ್ಥಳಿ ಅನಾವರಣಗೊಳ್ಳುವಲ್ಲಿ ಲಿಂಗೈಕ್ಯ ಡಾ. ಚೆನ್ನಬಸವ ಮಹಾಸ್ವಾಮಿಗಳ ಕೊಡುಗೆ ಅಪಾರವಾಗಿತ್ತು ಎಂದು ಸ್ಮರಿಸಿದರು.

ನಗರಸಭೆ ಅಧ್ಯಕ್ಷ ಪರಮಾನಂದ ಗವರೋಜಿ, ನಗರಸಭೆ ಸದಸ್ಯ ಕಿರಣ ಪಿಸಾಳ, ನಗರಸಭೆ ಸದಸ್ಯ ಈಶ್ವರ ವಾಳೆನ್ನವರ, ಟಿಎಪಿಸಿಎಂಎಸ್ ನಿರ್ದೇಶಕ ನಿಂಗಪ್ಪ ಕಡಪಟ್ಟಿ, ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷ ಈಶ್ವರ ಕರಬಸನವರ, ಕಡಕೋಳದ ನಾಗಪ್ಪ, ರಾಣಿ ಚೆನ್ನಮ್ಮ ಮಹಿಳಾ ಮಂಡಳದ ಅಧ್ಯಕ್ಷೆ ಆಶಾದೇವಿ ಗುಡಗುಂಟಿ, ಉಪಾಧ್ಯಕ್ಷೆ ಕಸ್ತೂರಿ ಹೊಟ್ಟಿ, ಶಂಕರ ಹನಗಂಡಿ ಇದ್ದರು.

ರಾಮೇಶ್ವರ ಕೋಚಿಂಗ್ ಕ್ಲಾಸಿನ ವಿದ್ಯಾರ್ಥಿನಿಯರಾದ ಅನಿತಾ ಕನಕನ್ನವರ, ಅಮೃತಾ ಮಂಗಸೂಳಿ ಭರತನಾಟ್ಯ ಪ್ರದರ್ಶಿಸಿದರು. ರಕ್ಷಿತಾ ಕರಡಿ ಪ್ರಾರ್ಥನೆ ಗೀತೆ ಹಾಡಿದರು. ಗದುಗಿನ ಗವಾಯಿ ರವಿಕುಮಾರ ಬೆಣ್ಣಿ, ತಬಲಾ ವಾದಕ ಹನಮಂತ ಅಂಕದ ಸಂಗೀತ ಸೇವೆ ಸಲ್ಲಿಸಿದರು. ಬಿಆರ್ಪಿ ದಾನಮ್ಮ ಪಂಚಕಟ್ಟಿಮಠ, ಬಸವರಾಜ ಬಳಗಾರ ಸೊಗಸಾಗಿ ನಿರೂಪಿಸಿದರು. ಓಲೇಮಠದ ಆನಂದ ದೇವರು ಶ್ರೀಗಳು ಶರಣು ಸಮರ್ಪಿಸಿದರು.

# 2025ರ ಭಗಿರಥ ಕ್ಯಾಲೆಂಡರ್ ಮತ್ತು ದಾವಣಗೆರೆ ಧ್ವನಿ ಭಗೀರಥ ಸುದ್ದಿ ಹಾಗೂ ಕರ್ನಾಟಕ ಧ್ವನಿ ಯುಟ್ಯೂಬ್ ಬಿಡುಗಡೆ

**ಬಳ್ಳಾರಿ :** ನಗರದ ಕಪ್ಗಲ್ಲು ರಸ್ತೆಯ ಕಾಲುವೆ ಹತ್ತಿರ ಇರುವ ಶ್ರೀ ಭಗೀರಥ ಮಹರ್ಷಿ ಪುತ್ಥಳಿಯ ಹತ್ತಿರ ಶುಕ್ರವಾರ ಶುಭದಿನ ಸಂಜೆ ಕಪ್ಪಗಲ್ ರಸ್ತೆ ನಗರ ಶ್ರೀ ಭಗೀರಥ ಉಪ್ಪಾರ ಸೇವಾ ಟ್ರಸ್ಟ್ ವತಿಯಿಂದ ಕ್ಯಾಲೆಂಡರ್ ಮತ್ತು ದಾವಣಗೆರೆ ಧ್ವನಿ ಯೂಟ್ಯೂಬ್ ಚಾನಲನ್ನು ಬಿಡುಗಡೆಗೊಳಿಸಲಾಯಿತು ಎಂದು ಭಗೀರಥ ಟ್ರಸ್ಟ್ ಅಧ್ಯಕ್ಷ ಯು ಆಂಜನೇಯಲು ತಿಳಿಸಿದ್ದಾರೆ.

ಜಾತಿ ಜನಗಣತಿಯಲ್ಲಿ ಸರ್ಕಾರ ಉಪ್ಪಾರ ಜನಾಂಗವನ್ನು ಕಡೆಗಣಿಸಿದ್ದು ರಾಜ್ಯದ್ಯಂತ ಉಪ್ಪಾರ ಜನಾಂಗ ಸುಮಾರು 45 ಲಕ್ಷದಷ್ಟು ಜನಸಂಖ್ಯೆ ಹೊಂದಿದ್ದಾರೆ ಇದನ್ನು ಜಾತಿ ಜನಗಣತಿಯಲ್ಲಿ ಪರಿಗಣಿಸಿರುವುದಿಲ್ಲ ಇದರಿಂದ ಉಪ್ಪಾರ ಜನಾಂಗದ ಅಭಿವೃದ್ಧಿಗೆ ಹಿನ್ನಡೆ ಆಗಲಿದೆ ಎಂದು ಉಪ್ಪಾರ ಜನ ಸಮುದಾಯದ ಉಪ್ಪಾರ್ ನಾಗೇಂದ್ರ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ.

ಹಾಗೂ ಸರ್ವ ಪದಾಧಿಕಾರಿಗಳು ಸಮಾಜಮುಖಂಡರು ಮತ್ತು ಯುವಕರು ಪ್ರಧಾನ ಕಾರ್ಯದರ್ಶಿ ಪಿ ನಾಗೇಂದ್ರ , ಖಜಾಂಚಿ ಆನಂದ್, ನಾರಾಯಣ , ಯು ಕೃಷ್ಣಯ್ಯ, ಉಪಾಧ್ಯಕ್ಷರು ಯು ವೀರಬಸವ, ತಿಮ್ಮಪ್ಪ ಕೊಳಗಲ್, ವೆಂಕಟರಾಮ , ಚಿನ್ನ , ಗುರುರಾಜ್ ಬಳ್ಳಾರಿ ತಾಲೂಕ ನೌಕರ ವೃತ್ತಿ ಪರ ಸಂಘ ಅಧ್ಯಕ್ಷರು ಪಿ ಮಲ್ಲಪ್ಪ , ಮಾನವ ಹಕ್ಕುಗಳ ಕಾವಲು ಸಮಿತಿ ರಾಜ್ಯದ್ಯಕ್ಷರು ಯು ಉರುಕುಂದಪ್ಪ ಸೇರಿದಂತೆ ಉಪ್ಪಾರ ಸಮುದಾಯದ ಇತರರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ರೈತನ ಜಮೀನಿನಲ್ಲಿ ವಿದ್ಯುತ್ ಕಂಬ ನೆಲಕ್ಕೆ ಗಮನ ಹರಸದ ಅಧಿಕಾರಿಗಳು ರೈತರ ಪರದಾಟ ಪಟ್ಟಣದಲ್ಲಿ ವಿದ್ಯುತ್ ಅಡೆತಡೆ





**ಕೂಡ್ಲಿಗಿ :** ಕೂಡ್ಲಿಗಿ ತಾಲೂಕು ಬಡಲಡಕು ಗ್ರಾಮದ ದೊಡ್ಡ ಗೊಲ್ಲರಟ್ಟಿಯ ಪೂಜಾರ್ ಮಲ್ಲಪ್ಪ ಎನ್ನುವ ರೈತನ ಹೊಲದಲ್ಲಿ 15 ತಾರೀಕು ನಂದು ಸುರಿದ ಮಳೆ ಗಾಳಿಗೆ ವಿದ್ಯುತ್ ಕಂಬ ನೆಲಕುರಳಿದ್ದು ಕಂಬ ತೆರವುಗೊಳಿಸಿ ರೈತನ ಜಮೀನಿನ ಪಂಪ್ಸೆಟ್ಟುಗಳಿಗೆ ಸಂಪರ್ಕ ನೀಡದೆ ಅಧಿಕಾರಿಗಳು ವಿಳಂಬ ಮಾಡುತ್ತಿದ್ದು ರೈತ ಮಲ್ಲಯ್ಯ ಕೆಲವು ರೈತರ ಜೊತೆ ಕಚೇರಿಗೆ ಪರದಾಡುತ್ತಿದ್ದಾರೆ ಇತ್ತೀಚಿನ ದಿನಗಳಲ್ಲಿ ಅಧಿಕಾರಿಗಳ ನಿರ್ಲಕ್ಷತೆಯಿಂದ ಅಥವಾ ಬೇಜವಾಬ್ದಾರಿತನದಿಂದ ಪಟ್ಟಣದ ಒಳಗಡೆ ನಿರಂತರ ವಿದ್ಯುತ್ತು ಕುಂಠಿತಗೊಳ್ಳುತ್ತಿದ್ದು ಗಂಟೆಗಟ್ಟಲೆ ವಿದ್ಯುತ್ತು ಅಡೆತಡೆಯಾಗುತ್ತಿದ್ದರು ಅಧಿಕಾರಿಗಳ ಬೇಜಾಬ್ದಾರಿ ಉತ್ತರ ನೀಡುತ್ತಿದ್ದಾರೆ ಕೂಡಲೇ ಅಖಿಲ ಭಾರತ ಕಿಸಾನ್ ಸಭಾ ಎಐಕೆಎಸ್ ನೇತೃತ್ವದಲ್ಲಿ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಕೂಡ್ಲಿಗಿ ತಾಲೂಕು ಅಧ್ಯಕ್ಷರಾದ ಪರಸಪ್ಪ ವಕೀಲರು ಪತ್ರಿಕೆಗೆ ತಿಳಿಸಿದ್ದಾರೆ.

# ರಾಷ್ಟ್ರೀಯಹೆದ್ದಾರಿ ಐವತ್ತರಲ್ಲಿ ಶೇಂಗಾ ಹಿಂಡಿ ಲಾರಿ ಪಲ್ಟಿ ದಗದಗನೇ ಬೆಂಕಿ ಲಾರಿ ಬಸ್ಮ



**ಕೂಡ್ಲಿಗಿ :** ಶೇಂಗಾ ಹಿಂಡಿ ತುಂಬಿದ ಲಾರಿಯೊಂದು ಏಕಾಏಕಿ ಪಲ್ಟಿಯಾಗಿ ಬೆಂಕಿ ಹತ್ತಿಕೊಂಡು ಸಂಪೂರ್ಣ ಸುಟ್ಟುಹೋದ ಘಟನೆ ತಾಲೂಕಿನ ಶಿವಪುರ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ 50 ರಲ್ಲಿ ಶನಿವಾರ ಬೆಳಿಗ್ಗೆ ನಡೆದಿದೆ. ಬಾಗಲಕೋಟೆ ಯಿಂದ ಬೆಂಗಳೂರು ಕಡೆಗೆ ಶೇಂಗಾ ಹಿಂಡಿ ತುಂಬಿದ್ದ ಲಾರಿ ಶನಿವಾರ ಬೆಳಿಗ್ಗೆ ತಾಲೂಕಿನ ಶಿವಪುರ ಗ್ರಾಮದ ರಾಷ್ಟ್ರೀಯ ಹೆದ್ದಾರಿ 50 ರಲ್ಲಿ ಸಂಚರಿಸುತ್ತಿರುವಾಗ ಹಠಾತ್ತನೆ ಪಲ್ಟಿಯಾಗಿ ಲಾರಿ ಸಮೇತ ಸರಕು ಕೂಡ ಬೆಂಕಿ ಹತ್ತಿಕೊಂಡು ಧಗಧಗನೆ ಉರಿಯಲು ಪ್ರಾರಂಭಿಸಿದೆ.

ಲಾರಿ ಡ್ರೈವರ್ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ವಿಷಯತಿಳಿದಕೂಡ್ಲಿಗಿಅಗ್ನಿಶಾಮಕದಳಬೆಂಕಿಯನ್ನು ಆರಿಸಿದ್ದಾರೆ. ಕೂಡ್ಲಿಗಿ ಠಾಣೆ ಪಿಎಸ್ಐ ಪ್ರಕಾಶ್ .ಸಿ ಸ್ಥಳದಲ್ಲಿನ ಸಂಚಾರಿ ವ್ಯವಸ್ಥೆ ಸುಗಮಗೊಳಿಸಲು ಒನ್ ವೇ ಮೂಲಕ ಸಂಚಾರಿಸುವಂತೆ ಕ್ರಮ ಕೈಗೊಂಡ ಸಂಚಾರ ಸುಗಮಗೊಳಿಸಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State

Designed by MKG-9535762618